ಮಕ್ಕಳ ಪುಸ್ತಕಮಾಲೆ

# ಪಕ್ಷಿ ಸಂಕುಲ

ಸುರೇಶ ಕುಲಕರ್ಣಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಮಕ್ಕಳ ಪುಸ್ತಕಮಾಲೆ

# ಪಕ್ಷಿ ಸಂಕುಲ

## ಸುರೇಶ ಕುಲಕರ್ಣಿ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಪಂಪಮಹಾಕವಿ ರಸ್ತೆ

ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

**PAKSHI SANKULA** - An illustrated Book on Birds by Suresh Kulkarni and Published by the Administrative Officer, Kannada Book Authority (Kannada Pustaka Pradhikara), Pampa Mahakavi Road, Chamrajpet, Bangalore - 560 018.

First Edition : 2000

Pages : 152 + viii

ಈ ಆವೃತ್ತಿಯ ಹಕ್ಕುಗಳು : ಕನ್ನಡ ಪುಸ್ತಕ ಪ್ರಾಧಿಕಾರ

ಪ್ರಥಮ ಮುದ್ರಣ : 2000

ISBN 81-7713-021-8

ಬೆಲೆ : ರೂ 150/-

ಕಲೆ : ಸುರೇಶ ಕುಲಕರ್ಣಿ

ಮುದ್ರಕರು :

ವಿನಾಯಕ ಆಫ್‌ಸೆಟ್ ಪ್ರಿಂಟರ್‍ಸ್

ಬೆಂಗಳೂರು - 560 076

☎ : 6682802, 6686149

# ಮುನ್ನುಡಿ

ವಿಶ್ವ ಸಾಹಿತ್ಯದಲ್ಲಿ ಶಿಶು ಸಾಹಿತ್ಯಕ್ಕೆ ಒಂದು ಪ್ರಮುಖ ಸ್ಥಾನ. ಬೆಳೆಯುವ ಎಳೆಯ ಮನಸ್ಸುಗಳ ಕಣ್ಣುಗಳ ಮತ್ತು ಬುದ್ಧಿಯ ಕುತೂಹಲವನ್ನು ಕೆಣಕುವ, ಮೊನಚಾಗಿಸುವ, ಅರಳಿಸುವ, ತಣಿಸುವ ಸಾಹಿತ್ಯ ಕೃತಿಗಳು ಅವರ ಬದುಕಿನ ಮಾರ್ಗವನ್ನು ನಿರ್ಮಿಸಲು ಸಹಾಯಕವಾಗುತ್ತವೆ. ಎಳೆಯ ವಯಸ್ಸಿನ ಪುಟಾಣಿಗಳ ಗ್ರಹಣ ಶಕ್ತಿಗೆ, ಸರ್ವಾಸಕ್ತಿಗೆ, ಕಲ್ಪನೆಗೆ, ಸಾಹಸಶೀಲತೆಗೆ, ಲೋಕಜ್ಞಾನಕ್ಕೆ, ನಿಸರ್ಗ ಪ್ರೀತಿಗೆ, ಮಾನವ ಪ್ರೇಮಕ್ಕೆ ಭದ್ರ ಬುನಾದಿಯನ್ನು ಕಟ್ಟಲು ಇಂಥ ಕೃತಿಗಳು ನೆರವಾಗುತ್ತವೆ. ಮಕ್ಕಳ ಸೃಜನಶೀಲ ಮತ್ತು ಕ್ರಿಯಾಶೀಲ ಸಾಮರ್ಥ್ಯಗಳನ್ನು ಈ ಕೃತಿಗಳ ವಸ್ತು, ಭಾಷೆ, ನಿರೂಪಣೆ, ಚಿತ್ರಣ, ವರ್ಣಗಳು ವಿಕಸನಗೊಳಿಸುವಂತೆ ಇದ್ದಾಗ ಮಾತ್ರ ಅವುಗಳ ಸಾರ್ಥಕತೆ. ಈ ಸಾಹಿತ್ಯದಲ್ಲಿ ರಂಜನೆ ಮತ್ತು ಬೋಧನೆ ಎರಡೂ ಅಗತ್ಯ ಅಂಶಗಳು. ದೊಡ್ಡವರು ಬಯಸಿದ್ದನ್ನೆಲ್ಲ ಮಕ್ಕಳ ಮೆದುಳಿಗೆ ತುರುಕುವ ಬದಲು ಅವರು ಓದ ಬಯಸುವ, ತಿಳಿಯಬಯಸುವ ಶಕ್ತಿಗೆ ಅನುಗುಣವಾಗಿ ಸಾಹಿತ್ಯದ ರಚನೆ ಆಗಬೇಕು.

ಪ್ರಪಂಚವನ್ನು ಕುರಿತಾದ ಪ್ರಾಥಮಿಕ ಮತ್ತು ಸಹಜ ತಿಳುವಳಿಕೆಯ ಜೊತೆ ಜೊತೆಯಾಗಿಯೇ ಜಗತ್ತಿನಲ್ಲಿ ನಾಗಾಲೋಟದಿಂದ ಬೆಳೆಯುತ್ತಿರುವ ವಿಜ್ಞಾನ, ತಂತ್ರಜ್ಞಾನ, ಸಮಾಜ ವಿಜ್ಞಾನ, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಸಮೂಹ ಮಾಧ್ಯಮ, ಸಾಹಿತ್ಯ, ಕಲೆ, ಸಮಕಾಲೀನ ಬದುಕಿನ ಸಂಗತಿಗಳು–ಇವೆಲ್ಲವುಗಳ ಬಗ್ಗೆ ಆರಂಭಿಕ ಅರಿವನ್ನಾದರೂ ಮಕ್ಕಳಲ್ಲಿ ಮೂಡಿಸುವುದು ಮತ್ತು ಮೊಳಕೆಯಾಗಿರುವ ಅವರ ಆಸಕ್ತಿ ಕುತೂಹಲಗಳನ್ನು ಬೆಳೆಸಿ ವಿಸ್ತರಿಸುವುದು ಇಂಥ ಪುಸ್ತಕಗಳ ಪ್ರಾಥಮಿಕ ಕರ್ತವ್ಯ. ಕನ್ನಡದಲ್ಲಿ ಅಜ್ಜಿ ಕಥೆಗಳಿಂದ ಹಿಡಿದು ಸಮಕಾಲೀನ ಜಗತ್ತಿನ ಹಲವು ವಿಷಯಗಳ ಬಗ್ಗೆ ಮಕ್ಕಳ ಪುಸ್ತಕಗಳು ಸಾಕಷ್ಟು ರಚನೆಯಾಗಿವೆಯಾದರೂ ಆಗಬೇಕಾದ ಸಂಖ್ಯೆಯಲ್ಲಿ, ಸತ್ವದಲ್ಲಿ ಮತ್ತು ವಿಧಾನದಲ್ಲಿ ಆಗಿಲ್ಲ ಎನ್ನುವುದು ನಾವು ಮರೆಯಬಾರದ ಕಹಿ ಸತ್ಯವಾಗಿದೆ. ಈ ಕಾರಣದಿಂದ ಮತ್ತು ಆಧುನಿಕ ವಿದ್ಯುನ್ಮಾನ ಮಾಧ್ಯಮಗಳ ಸೆಳೆತಗಳಿಗೆ ಸುಲಭವಾಗಿ ಒಳಗಾಗುವ ಮಕ್ಕಳಿಗೆ ಓದಿನ ಮಾಧ್ಯಮದಲ್ಲಿ ಸದಭಿರುಚಿಯನ್ನು ಮತ್ತು ಆಕರ್ಷಣೆಯನ್ನು ಮೂಡಿಸಿ, ಅವರ ಭವಿಷ್ಯದ ಬದುಕಿಗೆ ಬೆಳಕಿನ ದಾರಿಯನ್ನು ನಿರ್ಮಿಸಲು ಅನುವು ಮಾಡಿಕೊಡುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ ಮಕ್ಕಳ ಪುಸ್ತಕಗಳನ್ನು ವೈವಿಧ್ಯಮಯವಾಗಿ ಹೊರತರುವ ಸದಾಶಯವನ್ನು ಹೊಂದಿದೆ. ಮಕ್ಕಳ ಗ್ರಹಣ ಶಕ್ತಿಗೆ ನಿಲುಕುವ ಸರಳ ಸುಲಭ ಭಾಷೆಯಲ್ಲಿ ಮತ್ತು ಆಯಾ ವಸ್ತುವನ್ನು ಬಣ್ಣ ಮತ್ತು ಆಕಾರಗಳ ಮೂಲಕ ಮನದಲ್ಲಿ ಅಚ್ಚೊತ್ತಿ ನಿಲ್ಲಿಸುವಂಥ ರೀತಿಯಲ್ಲಿ ಪುಸ್ತಕಗಳನ್ನು ಪ್ರಕಟಿಸುವ ಇರಾದೆ ಪ್ರಾಧಿಕಾರದ್ದು.

ಈ ನಿಟ್ಟಿನಲ್ಲಿ ಮಕ್ಕಳ ಜ್ಞಾನಾರ್ಜನೆ ಮತ್ತು ಮನೋವಿಕಾಸಕ್ಕೆ ಅನುಕೂಲವಾಗುವ ''ಪಕ್ಷಿ ಸಂಕುಲ'' ಎಂಬ ಮಾಹಿತಿಪೂರ್ಣ ವರ್ಣಚಿತ್ರಗಳ ಈ ವಿಶಿಷ್ಟ ಪುಸ್ತಕವನ್ನು ಪ್ರಾಧಿಕಾರ ಪ್ರಕಟಿಸುತ್ತಿದೆ.

ಪು. ತಿ. ನೋ.

ದಿನದಿನಕ್ಕೆ ನಿಸರ್ಗ ತನ್ನ ಸಹಜ ಸಮೃದ್ಧಿಯನ್ನು ಮತ್ತು ವೈವಿಧ್ಯವನ್ನು ಕಳೆದುಕೊಂಡು ಬಡಕಲಾಗುತ್ತಿರುವ ಈ ವಿಷ ಸನ್ನಿವೇಶದಲ್ಲಿ ಅಸಂಖ್ಯಾತ ಸಂಖ್ಯೆಯಲ್ಲಿ ಪ್ರಪಂಚದ ತುಂಬ ತಮ್ಮ ವರ್ಣ ವೈವಿಧ್ಯ, ಆಕಾರ ವೈವಿಧ್ಯ ಹಾಗೂ ಸ್ವರೂಪ ವೈವಿಧ್ಯಗಳಿಂದ ಕಂಗೊಳಿಸುವ ಪಕ್ಷಿ ಸಮುದಾಯದಲ್ಲಿ ಎಪ್ಪತ್ತನಾಲ್ಕು ವಿಶಿಷ್ಟ ಮತ್ತು ಆಕರ್ಷಕ ಬಗೆಯ ಹಕ್ಕಿಗಳನ್ನು ಹಾಗೂ ಅವುಗಳ ಸಂಕ್ಷಿಪ್ತ ಪರಿಚಯವನ್ನು ಸುಂದರ ಸಹಜ ಮತ್ತು ಅತ್ಯಾಕರ್ಷಕ ಚಿತ್ರಗಳ ಮೂಲಕ ಈ ಕೃತಿಯಲ್ಲಿ ಕಡೆದು ನಿಲ್ಲಿಸಲಾಗಿದೆ. ಇವು ಮಕ್ಕಳ ಆಸಕ್ತಿ ಮತ್ತು ಕಲ್ಪನೆಗಳನ್ನು ಗರಿಗೆದರಿಸಿ ಅಪೂರ್ವ ಆನಂದವನ್ನು ಅವರಿಗೆ ನೀಡುತ್ತವೆ ಎಂದು ಭಾವಿಸಲಾಗಿದೆ. ಇಂಥದೊಂದು ಕೃತಿಯನ್ನು ತಮ್ಮ ವರ್ಣಚಿತ್ರ, ಕಲಾ ನೈಪುಣ್ಯದೊಡನೆ ಮತ್ತು ಅಭ್ಯಾಸಪೂರ್ಣ ಮಾಹಿತಿಯೊಡನೆ ಸುಪ್ರಸಿದ್ಧ ಚಿತ್ರ, ಕಲಾವಿದರಾದ ಶ್ರೀ ಸುರೇಶ್ ಕುಲಕರ್ಣಿಯವರು ಬಹು ಪರಿಶ್ರಮದಿಂದ ಸಿದ್ಧಪಡಿಸಿಕೊಟ್ಟಿದ್ದಾರೆ. ಇಂಥ ಪುಸ್ತಕಕ್ಕೆ ಅಗತ್ಯವಾದ ಬಾಹ್ಯ ಮತ್ತು ಆಂತರಿಕ ಸೌಂದರ್ಯದೊಡನೆ ಶ್ರೀ ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ ಅವರು ಇದನ್ನು ಮುದ್ರಿಸಿಕೊಟ್ಟಿದ್ದಾರೆ. ಪ್ರಾಧಿಕಾರದ ಮಾನ್ಯ ಸದಸ್ಯರು ಇದರ ಪ್ರಕಟಣೆಗೆ ಸಮ್ಮತಿಸಿದ್ದಾರೆ. ಇವರೆಲ್ಲರಿಗೂ ಪ್ರಾಧಿಕಾರದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

ಬೆಂಗಳೂರು

ಡಾ. ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

# ಲೇಖಕರ ಮಾತು

'ಪಕ್ಷಿ ಸಂಕುಲ' ಅದ್ಭುತವಾದದ್ದು, ವಿಶಾಲವಾದದ್ದು, ಪ್ರಪಂಚದಲ್ಲಿ ಸುಮಾರು ೮೬00 ಜೀವಂತ ಪಕ್ಷಿ ಪ್ರಭೇದಗಳಿವೆ. ಭಾರತದಲ್ಲಿ ಸುಮಾರು ೧೨00 ಪ್ರಭೇದಗಳಿದ್ದು ಅವು ೭೫ ಕುಟುಂಬ, ೨೦ ವರ್ಗಗಳನ್ನು ಪ್ರತಿನಿಧಿಸುತ್ತವೆ" ಎಂದು ಧಾರವಾಡಕ್ಕೆ ೧೯೭೦ರಲ್ಲಿ ಪಕ್ಷಿತಜ್ಞರಾಗಿದ್ದ ಡಾ|| ಸಲೀಂ ಅಲಿಯವರು ಆಗಮಿಸಿ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಭಾಷಣ ಮಾಡಿದಾಗ ಕೇಳಿದ ನೆನಪು. ಆಗ ನಾನು ಬಿ.ಎಸ್‌ಸಿ. ಕೊನೆಯ ವರ್ಷದಲ್ಲಿ ಓದುತ್ತಿದ್ದೆ. ಪ್ರಿ.ಡಾ.ಜಿ.ಸಿ. ಉತ್ತಂಗಿಯವರ ಅಧ್ಯಕ್ಷತೆಯಲ್ಲಿ ಡಾ|| ಸಲೀಂ ಅಲಿಯವರು ತಯಾರಿಸಿದ 'ಪ್ಲಾಯ್ ಕ್ಯಾಚರ್' *(Paradise Flycatcher)* ಪಕ್ಷಿಯ ಚಿತ್ರೀಕರಣ ಮಾಡಿದ್ದನ್ನು ತೋರಿಸಿದರು. ಚಿತ್ರೀಕರಿಸುವಾಗಿನ ಪರಿಶ್ರಮವನ್ನು ಸಾಹಸವನ್ನು ವಿವರಿಸಿದರು. ಅದೊಂದು ಅದ್ಭುತ ಅನುಭವ ನನಗೆ.

ಚಿಕ್ಕಂದಿನಿಂದಲೂ ಪಕ್ಷಿಗಳನ್ನು ನೋಡಿ ಆನಂದಿಸುತ್ತಿದ್ದ ನನಗೆ ಪ್ರೇರಣೆ ದೊರೆಯಿತು. 'ಪಕ್ಷಿ ವೀಕ್ಷಣೆ' ಹವ್ಯಾಸವಾಯಿತು. ಪಕ್ಷಿಗಳನ್ನು ನಾವು ನೋಡಲು ಹೋಗುವಾಗ, ಪಕ್ಷಿಗಳು ನಮಗಿಂತಲೂ ಮುಂಚಿತವಾಗಿ ನಮ್ಮನ್ನು ನೋಡಿ ಅಡಗಿಕೊಳ್ಳುತ್ತಿದ್ದವು. ಇಲ್ಲವೇ ಹಾರಿ ಹೋಗುವವು. ಗಿಡ-ಗಂಟೆಗಳೊಳಗೆ ಕುಳಿತು ಕೂಗುವವು. ಇಲ್ಲವೆ ಕೂಗುವದನ್ನು ನಿಲ್ಲಿಸಿಬಿಡುವವು. 'ಪಕ್ಷಿ ವೀಕ್ಷಣೆ' ನಮ್ಮಲ್ಲಿ ಕುತೂಹಲವನ್ನು ಸಹನೆಯನ್ನು ತೀಕ್ಷ್ಣ ದೃಷ್ಟಿಯನ್ನು ಮತ್ತು ಸೃಷ್ಟಿಯನ್ನು ಮತ್ತು ಸೃಷ್ಟಿಯ ವೈವಿಧ್ಯತೆಯ ಅರಿವನ್ನು ಬೆಳೆಸುವವು.

ನಾನು ಪಕ್ಷಿಗಳ ಚಿತ್ರಗಳನ್ನು ಗುರುತಿಸಿ ಸ್ಥಳದಲ್ಲಿಯೇ ರೇಖಾಚಿತ್ರ ತೆಗೆದು ಸಲೀಂ ಅಲಿಯವರ *'The book of Indian bird'* ಪುಸ್ತಕದಲ್ಲಿಯ ಚಿತ್ರದೊಂದಿಗೆ ಹೋಲಿಸಿ ನೋಡುತ್ತಿದ್ದೆ. ಹೈಸ್ಕೂಲಿನಿಂದ ಪ್ರಾಥಮಿಕ ಶಾಲೆಗೆ ಮುಖ್ಯಾಧ್ಯಾಪಕನಾಗಿ ಹೋಗುವ ಯೋಗ ದೊರಕಿತು. ಪ್ರಾಥಮಿಕ ಶಾಲೆಯ ಮಕ್ಕಳ ಕುತೂಹಲ ಬುದ್ಧಿ, ಪ್ರತಿಯೊಂದನ್ನೂ ಆಸ್ಥೆಯಿಂದ ನೋಡಿ, ಚರ್ಚಿಸುವ, ತಿಳಿದುಕೊಳ್ಳುವ ಗುಣಗಳು ನನಗೆ ಬಹಳೇ ಮೆಚ್ಚುಗೆಯಾದವು. ಮಕ್ಕಳು ಪ್ರತಿದಿವಸ ತಾವು ನೋಡಿದ ಪಕ್ಷಿಯ ವಿವರ ಹೇಳುತ್ತಿದ್ದರು. ಅವರಿಗೆ ಇನ್ನೂ ಹೆಚ್ಚಿನ ಮಾಹಿತಿ ಒದಗಿಸುವ ದೃಷ್ಟಿಯಿಂದ 'ಧಾರವಾಡದ ಪಕ್ಷಿಗಳು' ಎಂಬ ಶೀರ್ಷಿಕೆಗಳನ್ನು ಬರೆದು ಪ್ರದರ್ಶನವನ್ನು ಏರ್ಪಡಿಸಿದೆ. ಪ್ರದರ್ಶನವನ್ನು ಪರಿಸರವಾದಿ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ|| ಶಿವರಾಮ ಕಾರಂತರು ೨೪-೧-೯೫ರಂದು ಉದ್ಘಾಟಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರದರ್ಶನದಲ್ಲಿ ಡಾ|| ಆರ್. ಎನ್. ದೇಸಾಯಿಯವರ ಸಹಾಯದಿಂದ ಎಲ್ಲ ಪಕ್ಷಿಗಳ 'ಸ್ಟಫ್ಡ್ ಬರ್ಡ್'ಗಳನ್ನು ಇಡಲಾಗಿತ್ತು. ನಾಲ್ಕು ದಿನಸಗಳವರೆಗೆ ನಡೆದ ಈ ಪ್ರದರ್ಶನವನ್ನು ಸಾವಿರಾರು ಜನರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಗಿರೀಶ ಕಾರ್ನಾಡರು ಪ್ರೊ|| ಕೀರ್ತಿನಾಥ ಕುರ್ತಕೋಟಿ, ಡಾ.ರಮಾಕಾಂತ ಜೋಶಿಯವರೊಂದಿಗೆ ಬಂದು ಎಲ್ಲ ಚಿತ್ರಗಳನ್ನು ನೋಡಿ ಅದರಲ್ಲಿದ್ದ ವಿವರವನ್ನು ನೋಡಿ ಬಹಳೇ ಮೆಚ್ಚುಗೆ ವ್ಯಕ್ತಪಡಿಸುತ್ತ 'ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕು. ಇದೊಂದು ಅಮೂಲ್ಯ ಕೊಡುಗೆ, ಎಂದು ರಾಮ ಜೋಶಿಯವರಿಗೆ ಹೇಳಿದರು. ಡಾ|| ರಮಾಕಾಂತ ಜೋಶಿಯವರು ಕೂಡಲೇ ಕಾರ್ಯನಿರತರಾಗಿ ಇವುಗಳ ಫೋಟೋ ತೆಗೆದು, ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಕೊಟ್ಟು ಪುಸ್ತಕ ಪ್ರಕಟಿಸಲು ಒಪ್ಪಿಸಿದರು. ಆಗಿನ ಅಧ್ಯಕ್ಷರಾದ ಶ್ರೀ ನೆಲಮನೆ ದೇವೇಗೌಡರು ಚಿತ್ರವನ್ನು ತರಿಸಿಕೊಂಡು ನೋಡಿ, ಸಂತೋಷಪಟ್ಟು ಕೂಡಲೇ ಪ್ರಕಟಿಸುವದಾಗಿ ಹೇಳಿದರು. ಆದರೆ ಕೆಲವು ತಾಂತ್ರಿಕ ತೊಂದರೆಗಳಿಂದ ತಡವಾಗಿಯಾದರೂ ಈಗಿನ ಅಧ್ಯಕ್ಷರಾದ ಶ್ರೀಯುತ ಲಕ್ಕಪ್ಪಗೌಡರು ಲಕ್ಷ್ಯವಹಿಸಿ, ಸುಂದರವಾಗಿ ಪ್ರಕಟಿಸಲು ಪರಿಶ್ರಮಿಸಿದ್ದಾರೆ.

ಈ ಪುಸ್ತಕ ಪ್ರಕಟವಾಗಿ ಬರುವಲ್ಲಿ ಪ್ರೋತ್ಸಾಹಿಸಿದ, ಶ್ರಮಿಸಿದ ಪ್ರತಿಯೊಬ್ಬರಿಗೂ ನಾನು ಕೃತಜ್ಞ. ಈ ಪುಸ್ತಕದ ಪ್ರಯೋಜನವನ್ನು ಮಕ್ಕಳು ಪಡೆದು, ಪರಿಸರ ಪ್ರಜ್ಞೆ, ಪಕ್ಷಿ ವೀಕ್ಷಣೆ ಹವ್ಯಾಸ ಬೆಳೆಸಿಕೊಂಡರೆ ನನ್ನ ಶ್ರಮ ಸಾರ್ಥಕ.


ಸುರೇಶ ಕುಲಕರ್ಣಿ

ಚೈತನ್ಯ, 120

ಭಾರತಿನಗರ, ಧಾರವಾಡ - 580 001

# ಪಕ್ಷಿ ಸಂಕುಲ

## (ಗಿಡದಲ್ಲಿ ಗೂಡುಕಟ್ಟುವ ಪಕ್ಷಿಗಳು)

### ಭಾಗ - ೧

## ಪರಿವಿಡಿ


1. ಹದ್ದು
2. ಕಗ್ಗುಲ ಹಕ್ಕಿ
3. ಚಂಬು ಕುಟಿಕ
4. ಸಂಬಾರ ಕಾಗೆ
5. ಕಳಿಂಗಾ
6. ಬೂದು ಕಳಿಂಗ
7. ಜಂಗಲಿ ಕಂಸ
8. ಕೋಸ್ಯಾ
9. ಕಾಗೆ
10. ಬಾಬ್ಲರ ಹಕ್ಕಿ
11. ಕಾಡು ಕಾಗೆ
12. ಶ್ವೇತಾಕ್ಷಿ
13. ಸೊಹೆಲಿ
14. ಪೊಹಾರಿ
15. ರಾಜ ಬುಲ್‌ಬುಲ್
16. ಬುಲ್ ಬುಲ್
17. ಸಿಂಪಿಗಹಕ್ಕಿ
18. ಅಯೋರಾ
19. ಕಾಜಾಣ
20. ಹೊನ್ನಕ್ಕಿ
21. ಚಿಟ್ಟಹಕ್ಕಿ
22. ಕೆನ್ನೀಲಿ ಸೂರಕ್ಕಿ
23. ಹೂಕುಟಿಗ
24. ಗೀಜಗ

# ಪಕ್ಷಿ ಸಂಕುಲ

(ಸಾಮಾನ್ಯವಾಗಿ ಗಿಡದಲ್ಲಿ ಗೂಡು ಕಟ್ಟದ ಪಕ್ಷಿಗಳು)

ಭಾಗ -೨

## ಪರಿವಿಡಿ


26. ಬಿಳಿ ಹದ್ದು
27. ಗೂಗೆ ಮುಖದ ಹದ್ದು
28. ಟಿಟ್ಟಿಭ
29. ಪಾರಿವಾಳ
30. ಮಣಿ ಬೆಳವ
31. ಗಿಳಿ
32. ಆನ್ದೆಗ
33. ಹಾಲಕ್ಕಿ
34. ಚಂದ್ರಮುಕುಟ
35. ಕಳ್ಳಿಪೀರ
36. ನೀಲಕಂಠ
37. ಭೋರಾ
38. ಕೊಂಬು ಕೊಕ್ಕಿನ ಹಕ್ಕಿ
39. ನೆಲಗುಪ್ಪ
40. ಕೋಗಿಲೆ
41. ಪಿಪಿಳೀಕ
42. ಮೈನಾ
43. ಕಾಡು ಮೈನಾ
44. ಟುವ್ವಿ, ಪಿದ್ದಿ
45. ಸಿಪಾಯಿ ಬುಲ್‌ಬುಲ್
46. ಕೆಂಪೆದೆಯ ಪಿಕಳೀಕ
47. ಸಿಪಿಲೆ
48. ಸುವ್ವಿ
49. ಬೇಲಿ ಚಟಕ
50. ರಾಟವಾಳ
51. ಗುಬ್ಬಚ್ಚಿ
52. ಕಬ್ಬಕ್ಕಿ
53. ನವಿಲು

# ಪಕ್ಷಿ ಸಂಕುಲ

## (ನೀರಿನ ಸಮೀಪವಿರುವ ಪಕ್ಷಿಗಳು)

### ಭಾಗ - ೨

## ಪರಿವಿಡಿ


55. ಬೆಳ್ಳಕ್ಕಿ
56. ಕುರುಡು ಬಕ
57. ಕರಿ ಬೂಸಾ
58. ಬಿಳಿ ಬೂಸಾ
59. ಹೆಬ್ಬಾತು
60. ಗುಳು ಮುಳುಕ
61. ಕೊಕ್ಕರೆ
62. ಚರಲೆ
63. ಬಂಜರು ಕೋಳಿ
64. ನೀರು ಕೋಳಿ
65. ಬಂಜರು ಕೋಳಿ (ಕೆಂಪು ನೀರು ಕೋಳಿ)
66. ದಾಸ ಹಕ್ಕಿ
67. ಟಿಂಗೂರ
68. ಕೆಂಪು ಗದ್ದೆಗೊರವ
69. ಗಿಡಗ
70. ಉಲ್ಲಂಗಿ
71. ಕಪ್ಪು ಪಟ್ಟೆ ಮಿಂಚುಳ್ಳಿ
72. ಮಿಂಚುಳ್ಳಿ
73. ಹಳದಿ ದಾಸರಹಕ್ಕಿ
74. ಲಾವಕ್ಕಿ

# ಪಕ್ಷಿ ಸಂಕುಲ

(ನಿಡದಲ್ಲಿ ಗೂಡು ಕಟ್ಟುವ ಪಕ್ಷಿಗಳು)

## ಭಾಗ - ೧


# ಹದ್ದು

ಸುಮಾರು ೨೪" ಇರುವದು.
ಅತೀ ಎತ್ತರದಲ್ಲಿ ಆಕಾಶದಲ್ಲಿ ಸುತ್ತುವುದು. ಒಂಟಿ ಆಗಿಯೂ ಇಲ್ಲವೆ ಗುಂಪಿನಲ್ಲಿಯೂ ಇರುವುದು.
ಮನುಷ್ಯನ ವಾಸಕ್ಕೆ ಸಮೀಪ ಇರುವುದು.
ಕೊಳೆತ ಮಾಂಸ, ಹೊಲಸು ತಿಂಡಿ, ಇಲಿ, ಜಿತಿಕಾಟಿ ರೆಕ್ಕೆ ಇಡುವೆಗಳು, ಎರೆಹುಳ, ಅಶಕ್ತವಾದ ಪಕ್ಷಿಗಳು ಇದರ ಆಹಾರ.
ಸೀರು ಧ್ವನಿಯಲ್ಲಿ ಇವ್-ವಿರ್ರ್-ವಿರ್-ವಿರ್ ಎಂದು ಸೀಟಿ ಹೊಡೆದಂತೆ ಮಧುರವಾಗಿ ಕೇಳುವುದು.

**ಗೂಡು:** ಸೆಪ್ಟಂಬರ ದಿಂದ ಏಪ್ರಿಲ್ ತಿಂಗಳು.
ಸಣ್ಣ ಕಟ್ಟಿಗೆಯ ತುಂಡುಗಳಿಂದ ಕಟ್ಟಿದ ಗೂಡಿನಲ್ಲಿ ತಂತಿ ಚಿಂದಿ ಅರಿವೆಗಳು ಮತ್ತು ನಿರುಪಯುಕ್ತ ವಸ್ತುಗಳಿಂದ ತುಂಬಿರುವುದು. ಹಳೆಯ ಎತ್ತರವಾದ ಗಿಡಗಳ ಮೇಲ್ಭಾಗದಲ್ಲಿ ಗೂಡು ಕಟ್ಟುವುದು. ೨ ರಿಂದ ೪ ದಟ್ಟ ಕಂದು ಬಿಳಿ ಬಣ್ಣದ ತತ್ತಿಗಳ ಮೇಲೆ ಕೆಂಪು ಕಂದು ಬಣ್ಣದ ಚುಕ್ಕೆಗಳು ಇರುವವು. ಗಂಡು ಹೆಣ್ಣುಗಳೆರಡೂ ಕುಟುಂಬದ ಕೆಲಸದಲ್ಲಿ ಸಮಭಾಗಿಗಳಾಗಿರುವವು.


# Pariah kite

*Milvus migrans* चील



# Green Pigeon

*Treron phoenicoptera (Latham)*



# ಕಗ್ಗುಲ ಹಕ್ಕಿ

## ಮಣಿಯಾಡಲ ಹಕ್ಕಿ

ಪಾರಿವಾಳದಷ್ಟಿರುವುದು. (೧೩")
ಹಳದಿ ಕಾಲುಗಳು ಹಸಿರು ಬಣ್ಣದ ಈ ಹಕ್ಕಿ ಯಾವಾಗಲೂ ಗುಂಪಿನಲ್ಲಿ ಇರುವುದು. ಯಾವಾಗಲೂ ಮರದ ಮೇಲೆ ಇಲ್ಲವೇ ಎತ್ತರವಾದ ಸ್ಥಳಗಳಲ್ಲಿ ಕುಳಿತುಕೊಳ್ಳುವುದು. ನೆಲದ ಮೇಲೆ ಕುಳಿತುಕೊಳ್ಳುವದು ಅಪರೂಪ. ಹೆಚ್ಚಾಗಿ ಆಲದ ಮರ, ಅರಳಿ ಮರಗಳಲ್ಲಿ ಕಾಣುವುದು.

ಹಣ್ಣು-ಹಂಪಲು, ಬೀಜಗಳು ಇದರ ಆಹಾರ.

**ಗೂಡು :** ಮಾರ್ಚ ದಿಂದ ಜೂನ ತಿಂಗಳು.
ಪೂರ್ತಿಯಾಗಿ ಎಲೆಗಳಿಂದ ಮುಚ್ಚಿದ ಟೊಂಗೆಗಳಲ್ಲಿ ಗೂಡು ಮಾಡುವುದು. ಎರಡು ಬಿಳಿಯ ಹೊಳೆಯುವ ತತ್ತಿಗಳನ್ನು ಇಡುವುದು. ಗಂಡು ಹೆಣ್ಣು ಎರಡೂ ಸಂಸಾರದ ಭಾರವನ್ನು ಸಮನಾಗಿ ಹಂಚಿಕೊಳ್ಳುವವು.

# ಚಂಬು ಕುಟಿಕ

ಗುಬ್ಬಚ್ಚಿಗಿಂತ ಸ್ವಲ್ಪ ದೊಡ್ಡದಾಗಿರುವುದು (೮")
ಎದೆ ಮತ್ತು ನೆತ್ತಿಯ ಮೇಲೆ ಕೆಂಪು ಬಣ್ಣದ ಪುಚ್ಚಗಳಿರುವವು.
ಒಂಟಿಯಾಗಿ ಇಲ್ಲವೆ ಗುಂಪಿನಲ್ಲಿ ಆಲದಮರ, ಅಶ್ವತ್ಥಮರ
ಗಳಲ್ಲಿ ಇದ್ದು ಹಣ್ಣು ತಿನ್ನುತ್ತಿರುವುದು ಕಂಡುಬರುವುದು.
ಬೇಸಿಗೆಯಲ್ಲಿ ಒಂದೇ ಸವನೆ 'ಟಕ್-ಟಕ್' ಎಂದು ಇಡೀ
ದಿವಸ ಕೂಗುವುದು. ಸಣ್ಣ ಸಣ್ಣ ಹಣ್ಣುಗಳು, ರೆಕ್ಕೆ ಇರುವೆಗಳು
ಇದರ ಆಹಾರ.

**ಗೂಡು :** ಜನೇವರಿ ಯಿಂದ ಜೂನ ತಿಂಗಳು.
ಪೊಳ್ಳಾದ ಗಿಡದಲ್ಲಿ ತೂತು ತಗೆದು ಗೂಡು ಕಟ್ಟುವವು. ಗೂಡು
ಸಾಧಾರಣ ಎತ್ತರದಲ್ಲಿರುವುದು. ಟೊಂಗೆ ಭೂಮಿಗೆ
ಸಮಾಂತರವಾಗಿದ್ದರೆ ಪ್ರವೇಶ ದ್ವಾರವು ಕೆಳಮುಖವಾಗಿ
ಇರುವುದು. ೩ ಬಿಳಿ ಬಣ್ಣದ ತತ್ತಿಗಳನ್ನು ಇಡುವುದು.
ಗಂಡು ಮತ್ತು ಹೆಣ್ಣು ಎರಡೂ ಕುಟುಂಬದ ಜವಾಬ್ದಾರಿ
ಯನ್ನು ಹೊರುವವು.



# Coppersmith barbet

*Megalaima haemacephala* छोटा बसंत

# ಸಂಬಾರ ಕಾಗೆ

## ಕೆಂಬೂತ, ಡಂಬಕಾಗೆ, ಕುಪ್ಪುಳು, ರತ್ನಪಕ್ಷಿ

ಕಾಗೆಯ ಗಾತ್ರದಷ್ಟಿರುವುದು.
ಉದ್ದವಾದ ಮತ್ತು ಅಗಲವಾದ ಪುಚ್ಛ ಮತ್ತು ಕಂದು ಬಣ್ಣದ ಈ ಪಕ್ಷಿ ಕಂಟಿಗಳಲ್ಲಿ, ಹುಲ್ಲು ಪ್ರದೇಶದಲ್ಲಿ ಕಂಡು ಬರುವುದು. 'ಇದನ್ನು ನೋಡಿದರೆ ಶುಭವಾಗುವುದು' ಎಂಬ ನಂಬಿಕೆ ಇದೆ. ಹೆಚ್ಚಾಗಿ ಜೊತೆಯಾಗಿ ಇರುವವು.


ಕಂಬಳಿ ಹುಳ, ಕೀಟಕ, ಓತಿಕಾಟ, ಸಣ್ಣ ಇಲಿ ಮತ್ತು ಪಕ್ಷಿಗಳ ತತ್ತಿಗಳು ಇದರ ಆಹಾರ. ಭಾರವಾದ ಧ್ವನಿಯಲ್ಲಿ **'ಕೂಪ್-ಕೂಪ್-ಕೂಪ್'** ಎಂದು ೬-೭ ಸಲ ಅಲ್ಲದೇ ೨೦ ಸಲದಷ್ಟು ಕೂಗುವುದು.

**ಗೂಡು:** ಫೆಬ್ರುವರಿಯಿಂದ ಏಪ್ರಿಲ್ ತಿಂಗಳು. ಗಿಡದ ಟೊಂಗೆಗಳಿಗೆ ಎಲೆಗಳಿಂದ ಗೂಡನ್ನು ಗೋಲಾಕಾರದಲ್ಲಿ ಕಟ್ಟಿ ಬದಿಯಿಂದ ಗೂಡಿನಲ್ಲಿ ಹೋಗಲು ಮಾರ್ಗ ಮಾಡಿರುವುದು. ಗೂಡು ಸಾಧಾರಣ ಎತ್ತರದಲ್ಲಿ ಇರುವುದು. ೩-೪ ಬಿಳಿ ಬಣ್ಣದ ತತ್ತಿಗಳನ್ನು ಇಡುವುದು. ಗಂಡು ಮತ್ತು ಹೆಣ್ಣು ಎರಡೂ ಕುಟುಂಬದ ಹೊಣೆಯನ್ನು ಹೊರುವವು.

# Crow-Pheasant OR Coucal

*Centropus sinensis (Stephens)*

मोहक कोका



# ಕಳಿಂಗಾ

ಸುಮಾರು ಲ್ತಿ" ಇರುವುದು.
ಕಣ್ಣಿನ ಕಪ್ಪು ಪಟ್ಟಿ, ಬಲಿಷ್ಟವಾದ ಕೊಕ್ಕು ಇರುವುದು. ಗಿಡ-ಗಂಟಿಗಳಿರುವಲ್ಲಿ ಒಂಟಿಯಾಗಿ ಇರುವವು. ವಿವಿಧ ಪಕ್ಷಿಗಳಂತೆ ಅಣಕ ಧ್ವನಿ ಮಾಡುವುದು. ಇಣಚಿಯಂತೆ ಕಪ್ಪೆಯಂತೆ, ಬುಸುಗುಡುವ ಹಾವಿನಂತೆ, ಅದೇ ತಾನೆ ಹುಟ್ಟಿದ ನಾಯಿಮರಿ ಕುಂಯ್‌ಗುಡುವಂತೆ, ಮನುಷ್ಯನು ಸೀಟಿ ಹೊಡೆದಂತೆ ಧ್ವನಿಯ ಅಣಕ ಮಾಡುವುದು.

ಚಿಟ್ಟೆಗಳು, ಹಲ್ಲಿ, ಪತಿಕಾಟ, ಸಣ್ಣ ಇಲಿಗಳು ಇದರ ಆಹಾರ.

**ಗೂಡು:** ಫೆಬ್ರುವರಿಯಿಂದ ಜುಲೈ ತಿಂಗಳು.
ಕಪ್ಪಿನಾಕಾರದಲ್ಲಿ ಹುಲ್ಲು, ಅರಿವೆತುಂಡು, ಉಣ್ಣೆ ಅಲ್ಲದೇ ಗಿಡದ ತೊಗಟೆಯಿಂದ ಗೂಡನ್ನು, ಸಾಮಾನ್ಯವಾಗಿ ೧೫' ಗಿಂತ ಕೆಳಗೆ ಗೂಡನ್ನು ಗಿಡದ ಟೊಂಗೆಗೆ ಕಟ್ಟುವುದು. ೨ ರಿಂದ ೬ ತತ್ತಿಗಳನ್ನು ಇಡುವುದು. ತಿಳಿ ಹಸಿರು ತತ್ತಿಗಳ ಮೇಲೆ ಜಾಂಬಳಿ ಬಣ್ಣದ ಚುಕ್ಕೆಗಳಿರುವವು.




# Rufousbacked Shrike

*Lanius schach Linnaeus*

माह्रिया लोटोरा , काजल लोटोरा

# ಬೂದು ಕಳಿಂಗ


ಸುಮಾರು ೮" ಇರುವುದು.

ಬೆಳ್ಳಯಂತೆ ಹೊಳೆಯುವ ಹಕ್ಕಿ. ಕಣ್ಣಿನ ಮೇಲೆ ಪಟ್ಟಿ ಇರುವುದು. ಬಂತುಲು ಪ್ರದೇಶದಲ್ಲಿ ಮುಳ್ಳಿನ ಕಂಟಿಯ ಮೇಲೆ ಕುಳಿತು ಬೆಳೆಗಳನ್ನು ಹಾಳು ಮಾಡುವದಕ್ಕೆ ಬರುವ ಮಿಡತೆಗಳನ್ನು, ಇಲಿಗಳನ್ನು, ಓತಿಕಾಟಗಳನ್ನು ತಿನ್ನುವದಕ್ಕಿಂತ ಮೊದಲು ಚೂಪಾದ ಮುಳ್ಳಿಗೆ ಚುಚ್ಚಿಟ್ಟು ಕೊಂಡು ತನಗೆ ಬೇಕಾದಾಗ ತಗೆದು ತಿನ್ನುವದು.

ತಿನ್ನುವದಕ್ಕಿಂತ ಹೆಚ್ಚಾಗಿ ಕೊಂದು ಖುಷಿ ಪಡುವುದು.


**ಗೂಡು:** ಜನೇವರಿಯಿಂದ ಅಕ್ಟೋಬರ. ಮುಖ್ಯವಾಗಿ ಮಾರ್ಚದಿಂದ ಏಪ್ರಿಲದ ವರೆಗೆ.

ಮುಳ್ಳಿನ ಟೊಂಗೆಗೆ ಆಳವಾಗಿ ಕಪ್ಪಿನಾಕಾರದಲ್ಲಿ ಹುಲ್ಲು, ಅರಿವೆ ತುಂಡು, ಉಣ್ಣೆ ಮತ್ತು ಪುಚ್ಚಗಳಿಂದ ೪ರಿಂದ ೧೨ ಅಡಿ ಎತ್ತರದಲ್ಲಿ ಗೂಡು ಕಟ್ಟುವವು. ೩ ರಿಂದ ೬ ಆಳ ಹಸಿರು ಬಣ್ಣದ ತತ್ತಿಗಳ ಮೇಲೆ ಜಾಂಬಳ ಬಣ್ಣದ ಚುಕ್ಕೆಗಳಿರುವವು




# Grey Shrike

*Lanius excubitor Linnaeus* सफेद लोटोरा




# Blackheaded Cuckoo-Shrike

*Coracina melanoptera (Rüppeli)*

जंगलि कोइया

# ಜಂಗಲಿ ಕಂಪ

ಬುಲ್ ಬುಲ್‌ದಷ್ಟಿರುವುದು (೮")
ಗಂಡು ಬೂದು ಬಣ್ಣದ್ದಿದ್ದು ತಲೆ, ರೆಕ್ಕೆ ಮತ್ತು ಬಾಲದ ಪುಚ್ಛ ಕಪ್ಪು ಬಣ್ಣದ್ದಾಗಿರುವುದು. ಕೆಳಭಾಗ ಬಿಳಿಯ ಬಣ್ಣದ್ದಾಗಿರುವುದು. ಹೆಣ್ಣಿನ ತಲೆ ಬೂದು ಬಣ್ಣದ್ದಾಗಿದ್ದು ದೇಹದ ಭಾಗ ಬಿಳಿ ಮತ್ತು ಕರಿ ಗೆರೆಗಳಂತೆ ಕಾಣುವುದು. ಜೊತೆಯಾಗಿಯೇ ಇರುವವು. ಕೀಟಾಹಾರಿ ಪಕ್ಷಿಗಳ ಜೊತೆಯಲ್ಲಿಯೇ ಕೀಟಗಳ ಬೇಟೆ ಆಡುವವು. ಮಾವು, ಹುಣಿಸೆಮರ, ಲಿಂಬೆಗಿಡ ಮುಂತಾದ ಎಲೆಗಳಿಂದ ತುಂಬಿದ ಗಿಡಗಳಲ್ಲಿ ಇರುವವು.

ಕೀಟಕಗಳೇ ಇವುಗಳ ಮುಖ್ಯ ಆಹಾರ. **ವಿಟ್-ವಿಟ್-ವಿಟ್** ಎಂದು ಗಂಡು ಕೂಗುವುದು.

**ಗೂಡು :** ಮಾರ್ಚ್‌ದಿಂದ ಅಗಸ್ಟ್ ತಿಂಗಳು.
ಎರಡು ಟೊಂಗೆಗಳು ಕೂಡುವಲ್ಲಿ ಕಪ್ಪಿನಾಕಾರದಲ್ಲಿ ಜೇಡರ ಬಲೆಯಿಂದ ಕೂಡಿಸಿ ಗೂಡು ಕಟ್ಟುವುದು. ಸಾಮಾನ್ಯವಾಗಿ ೧೫' ಗಿಂತ ಕೆಳಗೆ ಗೂಡು ಇರುವುದು. ೨ ರಿಂದ ೩ ಬಿಳಿ ಹಸಿರು ಬಣ್ಣದ ತತ್ತಿಗಳ ಮೇಲೆ ಕಂದು ಬಣ್ಣದ ಚುಕ್ಕೆಗಳಿರುವವು.




# Large Cuckoo-Shrike

*Corocina novachollandiae (Gmelin)*

कोस्या

# ಕೀಸ್ಯ

ಪಾರಿವಾಳಕ್ಕಿಂತ ಸ್ವಲ್ಪ ಚಿಕ್ಕದಾಗಿರುವುದು (೧೯") ಗಿಡದ ಮೇಲೆ ವಾಸಿಸುವ ಪಕ್ಷಿ. ಯಾವಾಗಲೂ ಹಸಿರಾಗಿರುವ ಬೆಟ್ಟ-ಗುಡ್ಡಗಳಲ್ಲಿ, ಹೊಲ ಮತ್ತು ಊರು ಸಮೀಪ ಇರುವಲ್ಲಿ ಜೊತೆಯಾಗಿ ಇಲ್ಲವೇ ಕುಟುಂಬ ಸಮೇತ ಇರುವವು. ಒಂದು ಗಿಡದ ತುದಿಯಿಂದ ಇನ್ನೊಂದು ಗಿಡದ ತುದಿಗೆ ಹಾರಿ ಹೋಗುವವು. ಒಂದು ಹಾರಿ ಹೋದ ಮೇಲೆ ಉಳಿದವುಗಳು ಅದನ್ನು ಅನುಸರಿಸುವವು.

ಕೀರ ಧ್ವನಿಯಲ್ಲಿ ಮಧುರವಾಗಿ **ಟೀ-ಈs** ಎಂದು ಕೂಗುವುದು. ಕೀಟಕಗಳು, ಗಿಡದ ಎಲೆಗಳು, ಅತ್ತಿಹಣ್ಣು, ಆಲದ ಹಣ್ಣುಗಳು ಇದರ ಮುಖ್ಯ ಆಹಾರವಾಗಿವೆ.

**ಗೂಡು :** ಮೇ ದಿಂದ ಅಕ್ಟೋಬರ ತಿಂಗಳು
ಎರಡು ಟೊಂಗೆಗಳು ಕೂಡುವಲ್ಲಿ ಕಪ್ಪಿನಾಕಾರದ ಗೂಡನ್ನು ಜೇಡರ ಬಲೆಯಿಂದ, ಶಿಲಾವಲ್ಕ ಮತ್ತು ಸಣ್ಣ ಕಟ್ಟಿಗೆಯ ತುಂಡುಗಳಿಂದ ಎತ್ತರವಾದ ಗಿಡದಲ್ಲಿ ಕಟ್ಟುವುದು.
೩ ತಿಳಿ-ಹಸಿರು ಬಣ್ಣದ ತತ್ತಿಗಳ ಮೇಲೆ ದಟ್ಟ ಕಂದು ಅಥವಾ ನೇರಳೆ ಬಣ್ಣದ ಚುಕ್ಕೆಗಳಿರುವವು.




# House Crow


Corvus splendens Vieillot

# ಕಾಗೆ (ನಾಡ ಕಾಗೆ)

ಬಲಿ ಭುಕ್, ಅರಿಷ್ಟ, ಅರಿ, ಕರಟ, ಏಕದೃಶ್ಯ, ಏಕಲೋಚನ

ಸುಮಾರು ೧೭" ಇರುವುದು.
ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಗೆ ಕಾಣುವವು. ಮನುಷ್ಯನು ಎಸೆಯುವ ಆಹಾರ ಪದಾರ್ಥಗಳೇ ಇದರ ಆಹಾರ. ಸತ್ತ ಇಲಿ, ಗೆದ್ದಲು, ಹಣ್ಣುಗಳು ಕಾಳು, ತತ್ತಿಗಳನ್ನು ತಿನ್ನುವುದು. ರಾತ್ರಿ ವೇಳೆಯಲ್ಲಿ ಗುಂಪಾಗಿ ಒಂದೇ ಮರದಲ್ಲಿ ಕುಳಿತುಕೊಳ್ಳುವವು.
**ಕಾ: ಕಾ:** ಎಂದು ಕೂಗಿ ತನ್ನ ಬಳಗ ಕರೆಯುವುದು.

**ಗೂಡು:** ಮುಖ್ಯವಾಗಿ ಏಪ್ರಿಲ್ ದಿಂದ ಮೇ ತಿಂಗಳು. ಗೂಡನ್ನು ಸಣ್ಣ ಕಟ್ಟಿಗೆಯ ತುಂಡು, ತಂತಿಗಳಿಂದ ಕಟ್ಟಿ ಮಧ್ಯದಲ್ಲಿ ಸ್ವಲ್ಪ ತಗ್ಗಾದ ಕಪ್ಪಿನಾಕಾರ ಮಾಡುವುದು. ಗೂಡು ಗಿಡದಿಂದ ೧೦' ಗಿಂತ ಮೇಲೆ ಕಟ್ಟುವುದು. ಕೆಲವು ವೇಳೆ ಒಂದೇ ಗಿಡದಲ್ಲಿ ೨-೩ ಇರುವವು. ೪ ರಿಂದ ೫ ತಿಳಿ ನೀಲಿ ಅಥವಾ ತಿಳಿ-ಹಸಿರು ಬಣ್ಣದ ತತ್ತಿಗಳನ್ನಿಡುವುದು. ತತ್ತಿಗಳಿಗೆ ಗಂಡು ಮತ್ತು ಹೆಣ್ಣು ಎರಡೂ ಸರತಿಯಂತೆ ಕಾವು ಕೊಡುವವು.
ಕೋಗಿಲೆ ಕಾಗೆಯ ಗೂಡಿನಲ್ಲಿ ತತ್ತಿಯನ್ನಿಡುವುದು.




Common Babbler
*Turdoides caudatus (Dumont)*

# ಬಾಬ್ಲರ ಹಕ್ಕಿ

ಬುಲ್ ಬುಲ್ ಹಕ್ಕಿಯಷ್ಟಿರುವುದು. ಆದರೆ ಬಾಲ ಉದ್ದವಾಗಿ ಇರುವುದು. ೬ ರಿಂದ ೮ ಹಕ್ಕಿಗಳು ಕೂಡಿ ಇರುವವು. ರೆಕ್ಕೆ ಮತ್ತು ಪುಚ್ಛಗಳನ್ನು ಪೂರ್ತಿಯಾಗಿ ತೆರೆದು ಹಾರುವವು. ವಿಟ್·ವಿಟ್·ವಿಟ್ ರಿ·ರಿ·ರಿ·ರಿ·ರಿ·ರಿ ಸಾಮೂಹಿಕವಾಗಿ ಹೇಳಿ ಕೀಸರಾ ಬಾಸರ ಹಿಡಿಸುವವು.

ಕೀಟಕಗಳು, ಸಣ್ಣ ಹಣ್ಣುಗಳು, ಕಾಳುಗಳು ಮತ್ತು ಮಕರಂದ ಇವುಗಳ ಮುಖ್ಯ ಆಹಾರ.

**ಗೂಡು:** ಸಾಮಾನ್ಯವಾಗಿ ಮಾರ್ಚದಿಂದ ಜುಲೈ. ಹುಲ್ಲು, ನಾರಿನಿಂದ ಸುಂದರವಾದ ಕಪ್ಪಿನಾಕಾರದ ಗೂಡನ್ನು ೫' ಎತ್ತರದ ಮೇಲೆ ಗಿಡ ಗಂಟಿಗಳಲ್ಲಿ ಕಟ್ಟುವುದು. ೩ ರಿಂದ ೪ ತತ್ತಿಗಳು ನೀಲಿ-ಹಸಿರು ಬಣ್ಣದ್ದಾಗಿರುವವು. ಎರಡೂ ಪಾಲನೆ ಪೋಷಣೆಯನ್ನು ಮಾಡುವವು.




# Jungle crow

Corvus macrorhynchos जंगली कौव्वा

# ಕಾಡುಕಾಗೆ

ಸುಮಾರು ೧೮" ಇರುವುದು.
ಇಡೀ ದೇಹ ಮಿಂಚುವ ಕಪ್ಪು ಬಣ್ಣದ್ದಾಗಿರುವುದು. ನಾಡ ಕಾಗೆಗಳ ಗುಂಪಿನಲ್ಲಿ, ಹದ್ದುಗಳ ಗುಂಪಿನಲ್ಲಿ ಒಂದೊಂದಾಗಿ ಕಾಣುವವು. ಅಡವಿಯಲ್ಲಿ ಹುಲಿ ಅಥವಾ ಚಿರತೆ ಕೊಂದ ಪ್ರಾಣಿಯನ್ನು ಬಹುಬೇಗನೇ ಪತ್ತೆ ಹಚ್ಚುವುದು.

ಉಳಿದ ಪಕ್ಷಿಗಳ ತತ್ತಿಗಳು, ಚಿಕ್ಕಮರಿಗಳು ಅಲ್ಲದೇ ಸಣ್ಣ ಸಸ್ತನಿಗಳು ಇದರ ಆಹಾರ.

**ಗೂಡು** :ಸಾಮಾನ್ಯವಾಗಿ ಡಿಸೆಂಬರದಿಂದ ಏಪ್ರಿಲ್. ನಾಡ ಕಾಗೆಯಂತೆ ತತ್ತಿಗಳಿದ್ದರೂ ಅವುಗಳಿಗಿಂತ ಗಾತ್ರದಲ್ಲಿ ಸ್ವಲ್ಪ ದೊಡ್ಡವಾಗಿರುವವು. ನಾಡಕಾಗೆಯ ಗೂಡಿನಂತೆಯೇ ಕಟ್ಟುವವು. ೪ ರಿಂದ ೫ ತಿಳಿ ನೀಲಿ-ಹಸಿರು ಬಣ್ಣದ ತತ್ತಿಗಳ ಮೇಲೆ ಕಂದು ಬಣ್ಣದ ಗೆರೆಗಳು ಇರುವವು. ಎರಡೂ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ಹೊರುವವು.

# ಶ್ವೇತಾಕ್ಷಿ

ಗುಬಚ್ಚಿಗಿಂತಲೂ ಚಿಕ್ಕದಾಗಿರುವುದು.
ಗಿಡದಲ್ಲಿ ವಾಸಿಸುವುದು. ೪ ರಿಂದ ೨೦ ಪಕ್ಷಿಗಳ ಗುಂಪು ಗಿಡಗಂಟಿಗಳಲ್ಲಿ, ಎಲೆಗಳಲ್ಲಿ ಕೀಟಕಗಳನ್ನು ಹುಡುಕಿ ಬೇಟೆ ಆಡುವವು. ಹೂವಿನ ಮಕರಂದ, ಸಣ್ಣ ಹಣ್ಣುಗಳು ಮತ್ತು ಕೀಟಕಗಳು ಇದರ ಮುಖ್ಯ ಆಹಾರ.

**ಗೂಡು :** ಮುಖ್ಯವಾಗಿ ಏಪ್ರಿಲ್‌ದಿಂದ ಜುಲೈ ತಿಂಗಳು. ಎಲೆಗಳಿಂದ ಕಪ್ಪಿನಾಕಾರವಾಗಿ ಗಟ್ಟಿಯಾಗಿ ಕಟ್ಟುವವು. ಸುತ್ತಲೂ ಜೇಡರ ಬಲೆ ಸುತ್ತುವವು. ಹೊನ್ನಕ್ಕಿ ಗೂಡಿನ ಪ್ರತಿಕೃತಿಯಂತೆ ಗೂಡು ಇರುವುದು. ಇದರ ಗೂಡು ಚಿಕ್ಕದು ಆಗಿರುವುದು. ಟೊಂಗೆಯ ತುದಿ ಭಾಗದಲ್ಲಿ ಇರುವುದು. ಸಾಮಾನ್ಯವಾಗಿ ೫ ರಿಂದ ೧೦ ಅಡಿ ಎತ್ತರದಲ್ಲಿ ಕಟ್ಟುವವು. ೨ ಅಥವಾ ೩ ತಿಳಿ ನೀಲಿ ತತ್ತಿಗಳಿರುವವು. ಕೆಲವು ಸಲ ತತ್ತಿಯ ಅಗಲ ಭಾಗ ದಟ್ಟ ನೀಲಿಯಾಗಿದ್ದು ಟೋಪಿಹಾಕಿದಂತೆ ಇರುವುದು. ಎರಡೂ ಪಾಲನೆ ಪೋಷಣೆಯ ಹೊಣೆ ಹೊರುವವು.




# White-eye

*Zosterops palpebrosa* बबून




# Small Minivet

*Pericrocotus cinnamomeus* (Linnaeus)

बुल्लैचोसम् , सोहेली.

# ಸೊಹೆಲಿ

ಗುಬ್ಬಚ್ಚಿಗಿಂತ ಚಿಕ್ಕದಾಗಿರುವುದು.
ಗುಂಪಿನಲ್ಲಿರುವವು. ಎಲೆಗಳಿಂದ ತುಂಬಿದ ಗಿಡಗಳಲ್ಲಿ ವಾಸಿಸುವವು. ಕೀಟಕಗಳು, ಅದರ ಲಾರ್ವಾಗಳು ಇದರ ಮುಖ್ಯ ಆಹಾರ. ಹವೆಯಲ್ಲಿ ಹಾರಾಡುವ ಕೀಟಕಗಳನ್ನು ಹಿಡಿಯುವವು.

ಮಧುರವಾಗಿ ಸ್ವೀ-ಸ್ವೀ ಎಂದು ಹಾರುವಾಗ ಮತ್ತು ಆಹಾರ ಪಡೆಯುವಾಗ ಕೂಗುವವು.

**ಗೂಡು :** ಫೆಬ್ರುವರಿಯಿಂದ ಸೆಪ್ಟೆಂಬರ ತಿಂಗಳು.
ಸಣ್ಣ ಮತ್ತು ಅಗಲವಾದ ಕಪ್ಪಿನಾಕಾರದ ಗೂಡನ್ನು ಹುಲ್ಲಿನಿಂದ ಕಟ್ಟಿ ಹೊರಗಡೆಗೆ ಜೇಡರ ಬಲೆಯನ್ನು ಶಿಲಾವಲ್ಕಗಳನ್ನು ಹಚ್ಚುವವು. ಎತ್ತರದಲ್ಲಿ ಗೂಡು ಕಟ್ಟುವವು. ೩ ತಿಳಿ ಹಸಿರು ಅಥವಾ ಕೆನೆ ಬಣ್ಣದ ತತ್ತಿಗಳ ಮೇಲೆ ಕೆಂಪು-ಕಂದು ಬಣ್ಣದ ಚುಕ್ಕೆಗಳು ಇರುವವು. ಎರಡೂ ಪಾಲನೆ ಪೋಷಣೆಯಲ್ಲಿ ಸಮಭಾಗಿಗಳಾಗಿರುವವು.

# ಪೊಹಾರಿ

ಬುಲ್ ಬುಲ್ ಗಿಂತ ಚಿಕ್ಕದಾಗಿರುವುದು (೭")
ಪ್ರೌಢ ಗಂಡು ಕಪ್ಪು ತಲೆ ಹೊಂದಿದ್ದು ದೇಹ ಕೇಸರಿ ಬಣ್ಣದ್ದು ಇರುವುದು. ಗಿಡಗಳ ಮೇಲೆ ವಾಸಿಸುವವು. ಚಳಿಗಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುವವು. ಗುಂಪು ೨೦ ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು. ಗಿಡದ ತುದಿಯಿಂದ ಇನ್ನೊಂದು ತುದಿಗೆ ಒಂದೊಂದಾಗಿ ಹಾರಿ ಬರುವವು.

ಕೀಟಕಗಳು, ಲಾರ್ವಾಗಳು ಇದರ ಮುಖ್ಯ ಆಹಾರ.
**ವ್ಹೀ-ಟ್ವೀಟ್** ಅಥವಾ **ವ್ಹಿರೀರಿ-ವ್ಹಿರೀರಿ** ಎಂದು ಕೂಗುವುದು.

**ಗೂಡು:** ಏಪ್ರಿಲ್ ದಿಂದ ಜುಲೈ ತಿಂಗಳು.
ಭೂಮಿಗೆ ಸಮಾಂತರವಾಗಿರುವ ಟೊಂಗೆಗೆ ಕಪ್ಪಿನಾಕಾರದಲ್ಲಿ ಗೂಡನ್ನು ಶಿಲಾವಲ್ಕ, ಸ್ಪಂಜುಸಸ್ಯ (Moss) ಮತ್ತು ಜೇಡರ ಬಲೆಯಿಂದ ೧೦ ರಿಂದ ೪೦ ಅಡಿ ಎತ್ತರದಲ್ಲಿ ಗೂಡು ಕಟ್ಟುವವು. ೨ ರಿಂದ ೪ ಸಮುದ್ರ ನೀರಿನಂತಿರುವ ತಿಳಿ-ಹಸಿರು ಬಣ್ಣದ ತತ್ತಿಗಳ ಮೇಲೆ ದಟ್ಟ ಕಂದು ಬಣ್ಣದ ಚುಕ್ಕೆಗಳಿರುವವು. ಎರಡೂ ಪಾಲನೆ ಪೋಷಣೆಯಲ್ಲಿ ಸಮ ಪಾಲು ತೆಗೆದುಕೊಳ್ಳುವವು.

# Scarlet Minivet

*Pericrocotus flammeus* (Forster)

पोहारी बुलालचोश्म



# ರಾಜ ಬುಲ್‌ಬುಲ್

ಪಿಕಳಾರ, ನೊಣಹಿಡುಕ

ಸುಮಾರು ೮" ಅಂದರೆ ಬುಲ್ ಬುಲ್‌ದಷ್ಟಿರುವುದು. ಗಂಡಿನ ದೇಹ ಬಿಳಿಯಾಗಿದ್ದು ತಲೆ ಕರಿ-ನೀಲಿ ಬಣ್ಣದ್ದಾಗಿರುವುದು. ಯಾವಾಗಲೂ ಹೆಚ್ಚು ನೆರಳಿರುವ ತೋಟದಲ್ಲಿ ಬಾಂಬೂ ಬೆಳೆಯುವ ಕಾಡಿನಲ್ಲಿ ಹೆಚ್ಚಾಗಿ ಕಂಡು ಬರುವವು. ಕರ್ಕಶ ಧ್ವನಿಯಿಂದ **ಚೆ** ಅಥವಾ **ಚೆಚ್ಚೆ** ಎನ್ನುವುದು.

ಹಾರಾಡುವ ನೊಣ, ಗುಂಗಾಡುಗಳನ್ನು ಹಿಡಿದು ಭಕ್ಷಿಸುವುದು.

**ಗೂಡು:** ಫೆಬ್ರುವರಿಯಿಂದ ಜುಲೈ ತಿಂಗಳು.
ಉತ್ತಮ ತರದ ಹುಲ್ಲಿನ ಎಳೆಗಳಿಂದ ಗೂಡುಗಳನ್ನು ಕಟ್ಟಿ ಹೊರಗೆ ಜೇಡರ ಬಲೆಯನ್ನು ಹಚ್ಚುವುದು. ಕೊಂಬೆಗಳು ಸೇರುವ ಗಿಡದ ಟೊಂಗೆಗೆ ಮಡಕೆ ಆಕಾರದಲ್ಲಿ ಗೂಡು ಕಟ್ಟುವವು. ನೆಲದಿಂದ ಸುಮಾರು ೬ರಿಂದ ೧೨ ಅಡಿ ಎತ್ತರದಲ್ಲಿ ಗೂಡು ಇರುವುದು. ೩ ರಿಂದ ೫ ತಿಳಿ ಗುಲಾಬಿ ಮತ್ತು ನಸುಗೆಂಪು ಬಣ್ಣದ ತತ್ತಿಗಳನ್ನಿಡುವುದು. ಗಂಡು ಮತ್ತು ಹೆಣ್ಣು ಎರಡೂ ಪಾಲನೆ-ಪೋಷಣೆ ಮಾಡುವವು. ಆದರೂ ಹೆಣ್ಣು ಹೆಚ್ಚಿನ ಜವಾಬ್ದಾರಿಯನ್ನು ಹೊರುವುದು.




# Paradise Flycatcher

*Terpsiphone paradisi*

शहा बुलबुल, दूधराज




# Redvented Bulbul

*Pycnonotus cafer* (Linnaeus)

बुल्बुल्, गोल्डुम

# ಬುಲ್ ಬುಲ್ ಪೀಕಳೀಕ, ಪಿಕಳಾರ

## ಗೋವತ್ಸಕ, ಜುಟ್ಟಿನ ಹಕ್ಕಿ

ಗುಬಚ್ಚಿಗಿಂತ ದೊಡ್ಡದು (ಸುಮಾರು ೮")
ಚುರುಕಾಗಿ, ಜೋಡಿಯಾಗಿ ಮನೆಯ ಸುತ್ತಮುತ್ತಲೂ ಕಾಣುವವು. ತೋಟಗಳಲ್ಲಿ, ಗಿಡಗಂಟೆಗಳಲ್ಲಿ ಕಾಣುವವು. ಆಲ ಮತ್ತು ಅತ್ತಿಹಣ್ಣು ತಿನ್ನಲು ಬರುವವು.

ಹುಳ-ಹುಪ್ಪಡಿ, ಹಣ್ಣು ಮತ್ತು ತರಕಾರಿಗಳನ್ನು ತಿನ್ನುವವು. ಮಕರಂದವನ್ನೂ ಕುಡಿಯುವವು.

**ಗೂಡು:** ಮುಖ್ಯವಾಗಿ ಫೆಬ್ರುವರಿಯಿಂದ ಮೇ ತಿಂಗಳು. ಕಪ್ಪಿನಾಕಾರದ ಗೂಡು ಇದ್ದು, ಜೇಡನ ಬಲೆಯನ್ನು ಹಚ್ಚಿರುವುದು. ಕಂಟಿ ಅಥವಾ ಗಿಡದ ಟೊಂಗೆಗಳಲ್ಲಿ ೩ ರಿಂದ ೩೦ ಅಡಿ ಎತ್ತರದಲ್ಲಿ ಗೂಡು ಕಟ್ಟುವವು. ೨ ರಿಂದ ೩ ನಸು ಗುಲಾಬಿ ಬಣ್ಣದ ತತ್ತಿಗಳನ್ನು ಇಡುವುದು. ಗಂಡು ಮತ್ತು ಹೆಣ್ಣು ಎರಡೂ ಕುಟುಂಬದ ಹೊಣೆಯನ್ನು ಹೊರುವವು.

# ಸಿಂಪಿಗ ಹಕ್ಕಿ

## ದರ್ಜಿಹಕ್ಕಿ, ಟುವ್ವಿ

ಗುಬ್ಬಚ್ಚಿಗಿಂತ ಚಿಕ್ಕದಾಗಿರುವುದು.
ಒಂಟಿಯಾಗಿ ಇಲ್ಲವೆ ಜೊತೆಯಾಗಿ ಇರುವವು. ಕೈದೋಟದ ಗಿಡಗಂಟಿಗಳಲ್ಲಿ ಅತೀ ಚಟುವಟಿಕೆಯಿಂದ ಇರುವವು.
ಮನೆಯ ಅಂಗಳದಲ್ಲಿ ಧೈರ್ಯವಾಗಿ ಕುಣಿಯುತ್ತ ಬರುವುದು.
ಗಂಡು ಹೆಣ್ಣು ನೋಡಲು ಒಂದೇ ರೀತಿಯಾಗಿರುವವು.
ಚೂಪಾದ ಕೊಕ್ಕಿನ ಸಹಾಯದಿಂದ ಎಲೆಗಳನ್ನು ಜೋಡಿಸಿ ಹೊಲೆದು ಗೂಡು ಮಾಡಿಕೊಳ್ಳುವುದು.
ಟುವಿಟ್-ಟುವಿಟ್-ಟುವಿಟ್ ಅಥವಾ ಪ್ರೆಟಿ-ಪ್ರೆಟಿ-ಪ್ರೆಟಿ ಎಂದು ಚೀರು ಧ್ವನಿಯಿಂದ ಕೂಗುವುದು. ಸಣ್ಣ ಕೀಟಗಳು ಅದರ ತತ್ತಿ, ಲಾರ್ವಾಗಳು, ಮಕರಂದ ಇದರ ಆಹಾರ.

**ಗೂಡು:** ಏಪ್ರಿಲ್‌ದಿಂದ ಸೆಪ್ಟೆಂಬರ ತಿಂಗಳು.
ಚೂಪಾದ ಕೊಕ್ಕಿನಿಂದ ಎಲೆಗಳನ್ನು ಜೋಡಿಸಿ ಹೊಲಿದು ಅದರಲ್ಲಿ ಮೃದುವಾದ ಹುಲ್ಲಿನ ಎಳೆ, ಹತ್ತಿ, ಉಣ್ಣೆಯಿಂದ ಗೂಡನ್ನು ೩ ಅಡಿ ಎತ್ತರದ ಮೇಲೆ ಕಟ್ಟುವುದು. ೩-೪ ಕೆಂಪು ಅಥವಾ ತಿಳಿನೀಲಿ ತತ್ತಿಗಳ ಮೇಲೆ ಕೆಂಪು-ಕಂದು ಬಣ್ಣದ ಚುಕ್ಕೆಗಳಿರುವವು. ಹೆಣ್ಣು ತತ್ತಿಗೆ ಕಾವು ಕೊಡುವುದು. ಪೋಷಣೆಯನ್ನು ಎರಡೂ ಮಾಡುವವು.

# Tailor Bird

*Orthotomus sutorius (Pennant)*

दर्जी, फुत्की



# Iora

*Aegithina tiphia* शोभिगी



# ಅಯೋರಾ
## ಶೋಭಿಗಿ

ಗುಬ್ಬಚ್ಚಿಯಷ್ಟು ಗಾತ್ರದವುಗಳಾಗಿರುವವು (೬")

ತೋಟದಲ್ಲಿ, ದಟ್ಟವಾದ ಗಿಡಗಳಿರುವಲ್ಲಿ ಜೊತೆಯಾಗಿ ಕಂಡು ಬರುವವು. ಮಾವು, ಹುಣಿಸೆ ಮರ, ಬೇವಿನ ಮರ ಮುಂತಾದ ಗಿಡಗಳಲ್ಲಿ ವಾಸಿಸುವ ಪಕ್ಷಿ. ಟೊಂಗೆಯಿಂದ ಟೊಂಗೆಗೆ ಜಿಗಿಯುತ್ತಿರುತ್ತವೆ. ಎಲೆಗಳಲ್ಲಿ ಕೀಟಕಗಳನ್ನು ಹುಡುಕುತ್ತವೆ. ಧ್ವನಿಯು ಇಂಪಾಗಿದ್ದು ಸೀಟಿ ಹೊಡೆದಂತೆ ಇರುವುದು. ಕೀಟಕಗಳು, ಅವುಗಳ ತತ್ತಿ, ಲಾರ್ವಾ ಇವುಗಳ ಆಹಾರ.

**ಗೂಡು:** ಮೇ ದಿಂದ ಸಪ್ಟಂಬರ ತಿಂಗಳು.
ಕಪ್ಪಿನಾಕಾರದಲ್ಲಿ ಹುಲ್ಲಿನಿಂದ ಕಟ್ಟಿ ಜೇಡದ ಬಲೆಯನ್ನು ಹೊರಗಡೆಗೆ ಹಚ್ಚುವುದು. ೬ ರಿಂದ ೧೨ ಅಡಿಯ ಎತ್ತರದಲ್ಲಿ ಕವಲೊಡೆದ ಟೊಂಗೆಗೆ ಗೂಡು ಕಟ್ಟುವುದು.
೨ ರಿಂದ ೪ ತಿಳಿ ಗುಲಾಬಿ ತತ್ತಿಗಳಿದ್ದು ಅದರ ಮೇಲೆ ನೇರಳೆ ಕಂದು ಬಣ್ಣದ ಚುಕ್ಕೆಗಳಿರುವವು. ಎರಡೂ ಪಾಲನೆ ಪೋಷಣೆಯಲ್ಲಿ ಭಾಗವಹಿಸುವವು.

# ಕಾಜಾಣ

## ರಾಜಕಾಗೆ, ಭುಜಂಗ, ಕರೇಶಿಳ್ಳ, ಕರಕಾಯೋ ಬೋರ

ಬುಲ್‌ಬುಲ್‌ಗಿಂತಲೂ ದೊಡ್ಡದು (ಸುಮಾರು ೧೦") ತಾರು ಕಂಬದ ತಂತಿಯ ಮೇಲೆ ಅಥವಾ ಮೇಯುವ ಎತ್ತಿನ ಬೆನ್ನಿನ ಮೇಲೆ ಕುಳಿತಿರುವುದನ್ನು ಕಾಣಬಹುದು. ದನ-ಕರುಗಳು ಹುಲ್ಲಿನಲ್ಲಿ ಮೇಯಲು ಕಾಲನ್ನು ಮುಂದಕ್ಕೆ ಇಟ್ಟಾಗ ಜಿಟ್ಟೆಗಳು ಹಾರುವವು. ಅವುಗಳನ್ನು ಬೇಟೆ ಆಡಲು ದನಗಳ ಮೇಲೆ ಸವಾರಿ ಮಾಡುವುದು. ಕೀಟಗಳನ್ನಲ್ಲದೇ ಮಕರಂದವನ್ನೂ ಹೀರುವುದು. ಅನೇಕ **ಪಕ್ಷಿಗಳ ಧ್ವನಿ ಅನುಕರಣೆ** ಮಾಡುವುದು.

**ಗೂಡು:** ಏಪ್ರಿಲ್‌ದಿಂದ ಅಗಸ್ಟ್ ತಿಂಗಳು. ನಾಜೂಕಾದ, ಹಗುರಾದ ಕಪ್ಪಿನಾಕಾರದ ಗೂಡನ್ನು ಎಳೆಗಳಿಂದ ೧೨' ರಿಂದ ೩೦' ಎತ್ತರದ ಗಿಡದ ಟೊಂಗೆಗೆ ಕಟ್ಟಿ ಅದಕ್ಕೆ ಜೇಡರ ಬಲೆಯನ್ನು ಸುತ್ತುವದು. ೩ ರಿಂದ ೫ ತತ್ತಿಗಳನ್ನು ಇಡುವುದು. ಬಿಳಿಯ ತತ್ತಿಯ ಮೇಲೆ ಕಂದು ಬಣ್ಣದ ಚುಕ್ಕೆಗಳಿರುವವು. ಎರಡೂ ಸಂಸಾರದ ಹೊಣೆಯನ್ನು ಸಮನಾಗಿ ಹಂಚಿಕೊಳ್ಳುವವು. **ಗೂಡಿನ ಬಳಿ ಎಂಥ ದೊಡ್ಡ ಪಕ್ಷಿ ಬಂದರೂ ಅದನ್ನು ಧೈರ್ಯವಾಗಿ ಓಡಿಸುವುದು.**




# Black Drongo

*Dicrurus adsimilis* कोत्वाल

# Golden Oriole



# ಹೊನ್ನಕ್ಕಿ

## ಕಾಮಾಲೆ ಹಕ್ಕಿ

ಮೈನಾಕ್ಕಿಂತಲೂ ದೊಡ್ಡದಾಗಿರುವುದು.
ಆಲ, ಅರಳೀಮರ ಮುಂತಾದ ದೊಡ್ಡ ಮರಗಳಲ್ಲಿ ಕಾಣಿಸಿ ಕೊಳ್ಳುವುದು. ಜೋರಾಗಿ ರೆಕ್ಕೆ ಬಡಿಯುತ್ತ ಹಾರುವುದು.

ಆಲ, ಅರಳೀಮರದ ಹಣ್ಣುಗಳು ಮತ್ತು ಹೂವಿನ ಮಕರಂದ ಮುಖ್ಯ ಆಹಾರ. ಕೀಟಕಗಳನ್ನು ಹಿಡಿಯುವದು.
**ಚೀಽಯಕ್** ಎಂದೂ ಕೆಲವು ಸಲ **ಪಿಲೋಲೋ** ಎಂದು ಕೂಗುವುದು.

**ಗೂಡು:** ಏಪ್ರಿಲ್‌ದಿಂದ ಜುಲೈ ತಿಂಗಳು.
೧೨' ಯಿಂದ ೪೦' ಎತ್ತರದಲ್ಲಿ ಗೂಡು ಕಟ್ಟುವುದು.
೨ ರಿಂದ ೪ ತತ್ತಿಗಳನ್ನು ಇಡುವುದು. ತತ್ತಿಗಳು ಬಿಳಿಯಾಗಿ ಇದ್ದು ಅವುಗಳ ಮೇಲೆ ಕರಿ ಅಥವಾ ಕಂದು ಬಣ್ಣದ ಚುಕ್ಕೆಗಳು ಇರುವವು. ಗಂಡು ಮತ್ತು ಹೆಣ್ಣು ಎರಡೂ ಸಮನಾಗಿ ಪೋಷಣೆಯ ಹೊಣೆಯನ್ನು ಹೊರುವವು.

# ಚಿಟ್ಟುಹಕ್ಕಿ

ಗುಬ್ಬಚ್ಚಿಗಿಂತಲೂ ಚಿಕ್ಕದಾಗಿರುವುದು. ಜೊತೆಯಾಗಿರುವವು. ಪರಕೀಯ ಪರಾಗಸ್ಪರ್ಶ ಮಾಡಲು ಸಹಾಯಕವಾಗಿವೆ. ಹೂವಿನಿಂದ ಮಕರಂದವನ್ನು ಹೀರುವವು. **ಟಿಟ್‌ಯು-ಟಿಟ್‌ಯು-ಟಿಟ್‌ಯು, ಟ್ರ್‌ರ್-ರ್-ರ ಟಿಟ್** ಎಂದು ಕೂಗುವುದು. ಕೀಟಕಗಳು ಜೇಡ, ಮಕರಂದ ಇವುಗಳ ಆಹಾರ.

**ಗೂಡು:** ನಿರ್ದಿಷ್ಟವಾದ ತಿಂಗಳು ಯಾವುದು ಎಂಬುದು ನಿರ್ಧರಿಸಲಾಗಿಲ್ಲ. ಗೂಡು ಕದುರಿನಾಕಾರವಾಗಿದ್ದು ಉದ್ದ ಆಗಿರುವುದು. ಮೃದುವಾದ ಹುಲ್ಲಿನಿಂದ ನಿರುಪಯುಕ್ತ ಬಟ್ಟೆ, ಜೇಡನ ಬಲೆಯಿಂದ ಗೂಡನ್ನು ಸಾಧಾರಣ ಎತ್ತರದಲ್ಲಿ ಕಟ್ಟುವುದು. ಗೂಡಿನ ಪ್ರವೇಶದ್ವಾರವು ಬದಿಗೆ ಇರುವುದು. ಗೂಡು ಗಿಡ-ಗಂಟೆಗಳಲ್ಲಿ, ಗಿಡ ಬಳ್ಳಿಗಳಲ್ಲಿ ಕಂಡು ಬರುವುದು. ೨ ರಿಂದ ೩ ಬೂದು ಅಥವಾ ತಿಳಿ ಹಸಿರು ಬಣ್ಣದ ತತ್ತಿಗಳಿರುವವು. ಹೆಣ್ಣು ಮಾತ್ರ ಗೂಡು ಕಟ್ಟುವುದು, ತತ್ತಿಗಳಿಗೆ ಕಾವು ಕೊಡುವುದು. ಗಂಡು ಮರಿಗಳಿಗೆ ಆಹಾರ ಒದಗಿಸುವುದು.




# Purple rumped sunbird

*Nectarinia zeylonica* (Linnaeus) शोकोरखोरा

# ಕೆನ್ನೀಲಿ ಸೂರಕ್ಕಿ

ಕದಿರು ಗಿಣಿ, ಚಿಕ್ಕಹಕ್ಕಿ

ಗುಬ್ಬಚ್ಚಿಗಿಂತ ಚಿಕ್ಕದಾಗಿರುವುದು.
'ಮಕರಂದ ಪ್ರಿಯ' ವಾದ ಹಕ್ಕಿ. ಇದಲ್ಲದೇ ಜೇಡಹುಳ, ಹುಳ ಹುಪ್ಪಡಿಗಳನ್ನು ತಿನ್ನುವುದು. ಇವು ತಮ್ಮ ಕೊಕ್ಕಿನಿಂದ ಮಕರಂದವನ್ನು ಹೀರುವಾಗ 'ಪರಾಗ ಸ್ಪರ್ಶ' ಕ್ರಿಯೆ ನಡೆಯಲು ಸಹಾಯ ಮಾಡುವವು.
ಚೀವಿಟ್-ಚೀವಿಟ್-ಚೀವಿಟ್ ಎಂದು ಕೂಗುವವು.

**ಗೂಡು :** ಸಾಮಾನ್ಯವಾಗಿ ಗಿಡದ ಟೊಂಗೆ, ಕಂಟಿ ಅಥವಾ ಬಳ್ಳಿಗಳಲ್ಲಿ ಗೂಡು ಕಟ್ಟುವವು. ೨ ರಿಂದ ೩ ಕಂದು-ಹಸಿರು ಮಿಶ್ರಿತ ವಿವಿಧ ಛಾಯೆಗಳ ತತ್ತಿಗಳನ್ನು ಇಡುವುದು. ಹೆಚ್ಚಾಗಿ ಮಾರ್ಚದಿಂದ ಮೇ ತಿಂಗಳಲ್ಲಿ ಗೂಡು ಕಟ್ಟುವವು. ಹೆಣ್ಣು ಮಾತ್ರ ಗೂಡು ಕಟ್ಟುವದು ಮತ್ತು ಮರಿ ಮಾಡುವುದು. ಗಂಡು ಆಹಾರ ತಂದು ಕೊಡಲು ಸಹಾಯ ಮಾಡುವುದು.




**Purple Sunbird** शोकार खोरा

*Nectarinia asiatica (Latham)*

# ಹೂಕುಟಿಗ

ಕೆನ್ನೀಲಿ ಸೂರಕ್ಕಿಗಿಂತಲೂ ಚಿಕ್ಕದಾಗಿರುವುದು. (೪") ಒಂಟಿಯಾಗಿರುವುದು. ಅತ್ತಿಹಣ್ಣು ತಿನ್ನುವುದು. ಲೊರ್‍ಯಾಂಥಸ್ ಮತ್ತು ವಿಸ್ಕಂ ಪರೋಪಜೀವಿ ಸಸ್ಯಗಳ ಪಕ್ವ ಹಣ್ಣುಗಳನ್ನು ತಿನ್ನುವುದು.

**ಚಿಕ-ಚಿಕ-ಚಿಕ** ಎಂದು ಕಂಚಿನ ಕಂಠದಿಂದ ಕೂಗುವುದು.

**ಗೂಡು :** ಜನೇವರಿಯಿಂದ ಜೂನ ತಿಂಗಳು.
ಗಿಡದ ಟೊಂಗೆಗಳಿಗೆ ಅಂಡಾಕಾರದ ಗೂಡನ್ನು ಕಟ್ಟುವುದು. ಗೂಡಿನ ಕೆಳಗೆ ಎಲೆಗಳನ್ನು ಅಂಟಿಸಿರುವುದು. ಗಿಡದ ಎಲೆಗಳೊಂದಿಗೆ ತೂಗುತ್ತಿರುವ ಇದರ ಗೂಡು ಸುಲಭವಾಗಿ ಕಾಣುವುದಿಲ್ಲ. ಗೂಡಿನ ಪ್ರವೇಶ ದ್ವಾರವು ಬದಿಗೆ ಇರುವುದು. ೨ ರಿಂದ ೩ ತಿಳಿಗುಲಾಬಿ ಬಣ್ಣದ ತತ್ತಿಗಳಿದ್ದು ಕೆಂಪು-ಕಂದು ಬಣ್ಣದ ಚುಕ್ಕೆಗಳಿರುವವು.




# Thick billed Flowerpecker

Sturnus contra (Linnaeus)

# Baya Weaver Bird

Ploceus philippinus बोया





# ಗೀಜಗ

ಗುಬ್ಬಚ್ಚಿಯಷ್ಟು ಇರುವುದು. (೬")
ಇದು ಗುಬ್ಬಚ್ಚಿಯ ಜಾತಿಯದು. ಪ್ರಜನನ ಕಾಲವನ್ನು ಬಿಟ್ಟರೆ ಉಳಿದ ವೇಳೆಯಲ್ಲಿ ಇದರ ರೂಪ ಬಣ್ಣ ಎಲ್ಲವೂ ಗುಬ್ಬಚ್ಚಿಯ ಹಾಗೇ ಕಂಡು ಬರುವುದು. ಹೊಲದಲ್ಲಿ ಪೈರು ಬೆಳೆದು ನಿಂತಾಗ ಹಿಂಡು ಹಿಂಡಾಗಿ ಬರುವವು. ಕೀಟಗಳು,ಕಾಳುಗಳು ಇದರ ಆಹಾರ. ತನ್ನ ಸಂಗಾತಿಯನ್ನು ಕರೆಯುವಾಗ **'ಚಿಟ್-ಚಿಟ್-ಚಿಟ್'** ಎಂದೂ, ಗುಂಪಿನಲ್ಲಿ ಖುಷಿಯಿಂದ ಇದ್ದಾಗ **'ಚೀsss'** ಎಂದೂ ಕೂಗುವುದು.

**ಗೂಡು:** ಮೇ ದಿಂದ ಸಪ್ಟಂಬರ.
ಗೀಜಗದ ಗೂಡು ಸುಂದರವಾಗಿದ್ದು ತಲೆ ಕೆಳಗಾಗಿ ನೇತಾಡುತ್ತಿರುವುದು. ಕೆಳಗಿನಿಂದ ಪ್ರವೇಶ ದ್ವಾರವಿರುವುದು. ಭತ್ತದ ಸಣ್ಣ ಎಳೆಗಳಿಂದ, ಹುಲ್ಲಿನ ಗರಿಕೆಯಿಂದ ನೀರಿನ ಮೇಲೆ ಜೋತಾಡುವ ಗಿಡದ ಟೊಂಗೆಗಳಿಗೆ ಗೂಡನ್ನು ಕಟ್ಟುವುದು. ೨ ರಿಂದ ೪ ಬಿಳಿ ತತ್ತಿಗಳನ್ನು ಇಡುವುದು. ಗಂಡು ಗೂಡು ಕಟ್ಟುವುದು. ಹೆಣ್ಣು ಪಕ್ಷಿ ತತ್ತಿಗೆ ಕಾವು ಕೊಡುವುದು.

# ಪಕ್ಷಿ ಸಂಕುಲ

( ಸಾಮಾನ್ಯವಾಗಿ ನಿಡದಲ್ಲಿ ಗೂಡು ಕಟ್ಟದ ಪಕ್ಷಿಗಳು )

## ಭಾಗ - ೨

# Scavenger Vulture

Neophron percnopterus सफेद गिध




# ಬಿಳಿಹದ್ದು

೨೪" ದೊಡ್ಡದಾಗಿರುವುದು.
ಮನುಷ್ಯ ವಾಸದ ಸಮೀಪ ಇರುವುದು. ಗಿಡಗ, ಹದ್ದು ಮತ್ತು ಕಾಗೆಗಳ ಜೊತೆಯಲ್ಲಿ ಇರುವುದನ್ನು ಕಾಣಬಹುದು. ಸತ್ತ ಪ್ರಾಣಿಗಳನ್ನು ತಿನ್ನಲು ಬರುವುದು. ಪರಿಸರವನ್ನು ಸ್ವಚ್ಛವಾಗಿಡಲು ಸಹಾಯಕವಾಗಿದೆ.

**ಗೂಡು:** ಫೆಬ್ರುವರಿಯಿಂದ ಏಪ್ರಿಲ್ ತಿಂಗಳು. ಕಟ್ಟಿಗೆಯ ತುಂಡಿನಿಂದ ರಚಿಸಿದ ಗೂಡಿನಲ್ಲಿ ಅರಿವೆ ತುಂಡು, ಕೂದಲುಗಳನ್ನು ತುಂಬಿ ಗೂಡು ರಚಿಸುವುದು. ಗೂಡು ನೋಡಲು ಅಚ್ಚುಕಟ್ಟಾಗಿ ಕಾಣುವುದಿಲ್ಲ. ಗೂಡನ್ನು ಮಸೀದೆಗಳ ಮೇಲೆ, ಗೋಪುರಗಳ ಮೇಲೆ ಇಲ್ಲವೇ ದೊಡ್ಡ ಮರಗಳಾದ ಆಲ, ಅರಳಿ ಮುಂತಾದವುಗಳ ಮೇಲ್ಭಾಗದಲ್ಲಿ ಕಟ್ಟುವವು.

೨ ತತ್ತಿಗಳನ್ನು ಇಡುವುದು. ತತ್ತಿಗಳು ನೋಡಲು ಬಹಳ ಆಕರ್ಷಕವಾಗಿರುವವು. ಗಂಡು ಮತ್ತು ಹೆಣ್ಣು ಎರಡೂ ಸಂಸಾರದ ಹೊಣೆಯನ್ನು ಸಮನಾಗಿ ಹಂಚಿಕೊಳ್ಳುವವು.

## दस्तमाल, गिरगिट मार




# Pale Harrier

*Circus macrourus*

# ಗೂಗೆ ಮುಖದ ಹದ್ದು

## ನಸು ಬಣ್ಣದ ಹದ್ದು

ಸುಮಾರು ೨ ಅಡಿ ಇರುವುದು.
ಗೂಗೆ ಆಕಾರದ ದುಂಡು ತಲೆ ಇರುವುದು. ಉದ್ದವಾದ ಚೂಪಾದ ರೆಕ್ಕೆಗಳಿರುವವು. ಹಾರಾಟ ಗಮನಾರ್ಹವಾಗಿರುವುದು. ಹೆಣ್ಣು ದಟ್ಟ ಕಂದು ಬಣ್ಣದ್ದಾಗಿರುವುದು. ಬೆಳೆದು ನಿಂತ ಪೈರಿನ ಮೇಲೆ, ಹುಲ್ಲಿನ ಮೇಲೆ ನಿಧಾನವಾಗಿ ಹಾರುತ್ತಿರುವುದು. ಎತ್ತರದ ಮೇಲೆ ಆಕಾಶದಲ್ಲಿ ಹಾರುವಾಗ ನಿಂತಂತೆ ಕಾಣುವುದು. ನೆಲದ ಮೇಲೆ ಬೇಟೆ ಕಂಡೊಡನೆಯೇ ವೇಗವಾಗಿ ಅದರ ಮೇಲೆ ಎರಗುವುದು.

ಓತಿಕಾಟ, ಕಪ್ಪೆ, ಜಿಟ್ಟೆಗಳು, ಅಶಕ್ತವಾದ ಮತ್ತು ಸಣ್ಣ ಪಕ್ಷಿಗಳು ಇದರ ಆಹಾರ.

**ಗೂಡು:** ಏಪ್ರಿಲ್‌ದಿಂದ ಜೂನ ತಿಂಗಳು.
ಬೆಳೆಗಳ ಮಧ್ಯದಲ್ಲಿ ನೆಲದ ಮೇಲೆ ಎಲೆಗಳಿಂದ ಗೂಡು ಕಟ್ಟುವದು. ೪ ರಿಂದ ೫ ಬಿಳಿಯ ತತ್ತಿಗಳ ಮೇಲೆ ಕೆಂಪು-ಕಂದು ಬಣ್ಣದ ಚುಕ್ಕೆಗಳಿರುವ ತತ್ತಿಗಳನ್ನು ಇಡುವುದು.

# ಟಿಟ್ಟಿಭ

ಸುಮಾರು ೧೨" ಇರುವುದು.

ಬಯಲು ಭೂಮಿಯ ಪ್ರದೇಶದಲ್ಲಿ ಹುಲ್ಲು ಮತ್ತು ಅಲ್ಲಲ್ಲಿ ಕಂಟಿ ಬೆಳೆದಲ್ಲಿ ವಾಸಿಸುವುದು. ನೆಲದ ಮೇಲೆ ವೇಗವಾಗಿ ಓಡುವುದು. ಆಕಾಶದಲ್ಲಿ ವೇಗವಾಗಿ ಹಾರುವುದು.

'ಡಿಡ್-ಹಿ-ಡು-ಇಟ್' ಅಥವಾ 'ಪಿಟಿ-ಟು-ಡು-ಇಟ್' ಎಂದು ಸತತವಾಗಿ ಕೂಗುವುದು.

ಕೀಟಗಳು, ಮೃದ್ವಂಗಿಗಳು ಇದರ ಮುಖ್ಯ ಆಹಾರ.

**ಗೂಡು:** ಮಾರ್ಚ್ ದಿಂದ ಅಗಸ್ಟ್ ತಿಂಗಳು.
ನೆಲದ ಮೇಲೆ ತತ್ತಿಗಳನ್ನಿಡುವುದು. ತತ್ತಿಗಳ ಸುತ್ತಲೂ ಸಣ್ಣ ಸಣ್ಣ ಕಲ್ಲುಗಳನ್ನಿಡುವುದು. ೪ ತತ್ತಿಗಳನ್ನಿಡುವುದು. ಕಂದು ಬಣ್ಣದ ತತ್ತಿಗಳ ಮೇಲೆ ಕಪ್ಪು ಚುಕ್ಕೆಗಳಿರುವವು. ನೆಲದ ಮೇಲಿನ ತತ್ತಿಗಳನ್ನು ಗುರುತಿಸುವುದು ಕಷ್ಟಸಾಧ್ಯ ಕೆಲಸ. ಗಂಡು ಮತ್ತು ಹೆಣ್ಣು ಎರಡೂ ಕುಟುಂಬದ ಜವಾಬ್ದಾರಿಯನ್ನು ವಹಿಸುವವು.

# Redwattled Lapwing

*Vanellus indicus* तितीरी






# Blue rock pigeon

*Columba livia* कबूतर

# ಪಾರಿವಾಳ

ಸುಮಾರು ೩೩ ಸೆಂ.ಮಿ. ಇರುವುದು.

ಗುಡ್ಡಗಾಡಿನಲ್ಲಿ ವಾಸಿಸುವುದು. ಮನೆಗಳ ಸುತ್ತಮುತ್ತ ಕಾಣುವುದು. ಕಾಳಿನ ಗೋಡೌನ, ರೇಲ್ವೆಸ್ಟೇಶನ್ನು, ಹಾಳು ಬಿದ್ದ ಕಟ್ಟಡಗಳ ಹತ್ತಿರವೂ ವಾಸಿಸುವವು. ಇವುಗಳನ್ನು ಸಾಕುವರು. ಶಾಂತಿ ದ್ಯೋತಕವಾಗಿ ಹಾರಿ ಬಿಡುವರು.

ಶೇಂಗಾ, ಕಾಳುಕಡಿಗಳು ಮುಖ್ಯ ಆಹಾರ.
ಗುಟ್ರ್-ಗೂ, ಗುಟ್ರ್-ಗೂ ಎಂದು ಧ್ವನಿ ಮಾಡುವುದು.

**ಗೂಡು:** ನಿರ್ದಿಷ್ಟ ತಿಂಗಳು ಗೊತ್ತಾಗಿಲ್ಲ.
ಇಡೀ ವರ್ಷ ಮೊಟ್ಟೆಗಳನ್ನಿಡುವವು. ಮನೆಯ ಜಂತಿಯ ಸಂದುಗಳಲ್ಲಿ, ಸಣ್ಣ ಕಟ್ಟಿಗೆಯ ತುಂಡು ಮತ್ತು ಹುಲ್ಲಿನ ತುಂಡಿನಿಂದ ಗೂಡು ಕಟ್ಟುವವು. ೨ ಬಿಳಿಯ ತತ್ತಿಗಳನ್ನು ಇಡುವುದು. ಗಂಡು ಮತ್ತು ಹೆಣ್ಣು ಎರಡೂ ಕುಟುಂಬದ ಎಲ್ಲ ಹೊಣೆಯನ್ನು ಹೊರುವವು.

# ಮಣಿ ಬೆಳವ

## ಮಣಿಸೋರೆ ಹಕ್ಕಿ

ಮೈನಾ ಹಕ್ಕಿಗಿಂತ ಸ್ವಲ್ಪ ದೊಡ್ಡದು (೧೧")
ಬಯಲು ಸೀಮೆಯಲ್ಲಿ ಜೋತೆಯಾಗಿ ಇಲ್ಲವೆ ಗುಂಪಿನಲ್ಲಿ
ಇರುವವು. ಮಧ್ಯಾಹ್ನದ ಬಿಸಿಲಿನಲ್ಲಿ ಬಾಬೂಲ, ಜಾಲಿಗಿಡ
ಗಳಲ್ಲಿ ವಿಶ್ರಾಂತಿ ಪಡೆಯುವವು. ಸುಲಭವಾಗಿ
ಬಂಗಲೆಗಳಲ್ಲಿ, ಅಂಗಳದಲ್ಲಿ, ಕೈತೋಟದಲ್ಲಿ ಕಾಣುವವು.

ಸಾಮಾನ್ಯವಾಗಿ **ಕುಕ್-ಕೂ·ಕೂಕ್** ಎಂದು ಅನೇಕ ಸಲ
ಕೂಗುವವು. ಸಿಟ್ಟಿಗೆದ್ದಾಗ **ಕೂನ್-ಕೂನ್-ಕೂನ್** ಎಂದು
ಕೂಗುವವು.

**ಗೂಡು:** ಇಡಿ ವರ್ಷ.
ಸಣ್ಣ ಗಿಡದಲ್ಲಿ ಇಲ್ಲವೇ ಕಂಟಿಗಳಲ್ಲಿ ಟೊಂಗೆಗಳ ಧಾವಣಿ
ಮಾಡಿಕೊಂಡು ಗೂಡು ಕಟ್ಟುವವು. ಅತೀ ವಿರಳವಾಗಿ
ಮನೆಯ ಸಂದುಗಳಲ್ಲಿ ಗೂಡು ಮಾಡುವವು. ಎರಡು
ಬಿಳಿಯ ತತ್ತಿಗಳನ್ನಿಡುವುದು. ಗಂಡು ಮತ್ತು ಹೆಣ್ಣು
ಎರಡೂ ಕುಟುಂಬದ ಎಲ್ಲ ಕಾರ್ಯಗಳಲ್ಲಿ ಸಹಕರಿಸುವವು.

# Little brown dove

Steptopelia senegalensis छोटा फरव्ता



# ಗಿಳಿ

ಮೈನಾಗಿಂತಲೂ ದೊಡ್ಡದು.

ದೊಡ್ಡ ಗುಂಪುಗಳಲ್ಲಿ ಇರುವವು. ಹಣ್ಣುಗಳನ್ನು ಮತ್ತು ಬೆಳೆಗಳನ್ನು ತಿನ್ನುವುದಕ್ಕಿಂತ ಹೆಚ್ಚಾಗಿ ಕೆಡಿಸುವುದು. ಜೋರಾಗಿ ರೆಕ್ಕೆ ಬಡೆಯುತ್ತಾ ಹಾರುವುದು. ಇದು ಪಂಜರದ ಪಕ್ಷಿಯಾಗಿದೆ.

**ಕೀಂಯಕ ಕೀಂಯಕ ಕೀಂಯಕ** ಎಂದು ಕೂಗುವುದು.

**ಗೂಡು:** ಸಾಮಾನ್ಯವಾಗಿ ಫೆಬ್ರುವರಿ ಯಿಂದ ಏಪ್ರಿಲ್‌ದ ವರೆಗೆ ಗೂಡು ಕಟ್ಟುವವು. ಸ್ವಾಭಾವಿಕವಾಗಿರುವ ಗಿಡದ ಪೊಟರೆ, ಕಲ್ಲಿನ ಸಂದು, ಕಟ್ಟಡದ ಸಂದುಗಳಲ್ಲಿ ಗೂಡು ಮಾಡುವವು.

೩ ರಿಂದ ೬ ಶುಭ್ರ ಬಿಳಿಯಾದ ತತ್ತಿಗಳನ್ನು ಇಡುವುದು. ಗಂಡು ಮತ್ತು ಹೆಣ್ಣು ಎರಡೂ ಕುಟುಂಬದ ಕೆಲಸದಲ್ಲಿ ಸಮಭಾಗಿಯಾಗಿರುವವು.

# Roseringed Parakeet

*Psittacula krameri* (Scopoli) तोता




# ಆನ್ವೆಗ

ಕಾಗೆಯ ಗಾತ್ರದಷ್ಟಿರುವುದು (೧೭")
ರೇಷ್ಮೆ ಬಣ್ಣದ್ದಾಗಿರುವುದು. ಹಳೆಯ ಕೋಟೆಗಳಲ್ಲಿ
ವಾಸಿಸುವುದು. ರಾತ್ರಿ ವೇಳೆಯಲ್ಲಿ ಮಾತ್ರ ಹಾರಾಡು
ತ್ತಿದ್ದು ಹಗಲಿನಲ್ಲಿ ನಿಂತು ನಿದ್ದೆ ಮಾಡುವುದು.
ಸಪ್ಪಳಿಲ್ಲದಂತೆ ಹಾರುವುದು. ಮೊಲ ಮತ್ತು ಇಲಿ
ಗಳನ್ನು ಹಿಡಿಯುವುದು.

ಒಂದೇ ರೀತಿಯಾಗಿ ಭಯಾನಕವೆನಿಸುವಂತೆ
**'ಗೂಕ್-ಗೂಕ್'** ಎಂದು ಕೂಗುವುದು.

**ಗೂಡು:** ನಿರ್ದಿಷ್ಟವಾದ ತಿಂಗಳು ತಿಳಿದಿಲ್ಲ.
ಹಳೆಯ ಕಟ್ಟಡದ ಗೋಡೆಗಳ ಸಂದುಗಳಲ್ಲಿ
ಗಿಡದ ಪೊಟರೆಗಳಲ್ಲಿ ಸ್ಟ್ರಾ, ಕಟ್ಟಿಗೆಯ ತುಂಡು
ಅರಿವೆಯ ಚಿಂದಿಗಳಿಂದ ಗೂಡು ಕಟ್ಟುವುದು.
೪-೭ ಬಿಳಿಯ ನುಣುಪಾದ ಮತ್ತು ದುಂಡಾದ
ತತ್ತಿಗಳನ್ನಿಡುವುದು.




# Barn OR Screech Owl

*Tyto alba*

कुराया करैल




# Spotted owlet

Athene brama (Temminck)
कुसोव्टिय, छोघोद, खेकुसोट

# ಹಾಲಕ್ಕಿ

## ಚಿಟ್ಟಗೂಬೆ, ಹಾಲವಾಣದ ಹಕ್ಕಿ, ಚಿಕ್ಕಿಗೂಬೆ

ಮೈನಾಕ್ಕಿಂತ ಸ್ವಲ್ಪ ದೊಡ್ಡದಾಗಿರುವುದು.

ಇದು ರಾತ್ರಿವೇಳೆ ಚಟುವಟಿಕೆಯಿಂದ ಕೂಡಿದ್ದು ಹಗಲು ವಿಶ್ರಾಂತಿ ಪಡೆಯುತ್ತದೆ. ಇದರ ಕಣ್ಣುಗಳು ಮನುಷ್ಯರ ಕಣ್ಣುಗಳಂತೆ ನೇರವಾದ ದಿಕ್ಕಿನಲ್ಲಿ ನೋಡುತ್ತವೆ. ಹೊಲ-ಗದ್ದೆಗಳ ಬೆಳೆಗಳನ್ನು ಕಣಜಗಳನ್ನು ರಾತ್ರಿ ವೇಳೆಯಲ್ಲಿ ರಕ್ಷಿಸುವವು. ಬೀಟಲ್, ದೀಪದಹುಳ, ಇತರ ಕೀಟಕ ಮತ್ತು ಇಲಿಗಳು ಇದರ ಆಹಾರ.

**ಗೂಡು:** ಮುಖ್ಯವಾಗಿ ಫೆಬ್ರುವರಿಯಿಂದ ಸಪ್ಟೆಂಬರ. ಕಂಟಿಗಳ ಮಧ್ಯದಲ್ಲಿ ಅಥವಾ ಬಿದಿರಿನ ಪೊಳ್ಳಿನಲ್ಲಿ, ನೆಲದ ಮೇಲೆ ತತ್ತಿಗಳನ್ನು ಇಡುವವು. ೨ ತಿಳಿಗೆಂಪು ಬಣ್ಣದ ತತ್ತಿಯು ಮೇಲೆ ಕಂದು ಅಥವಾ ಜಾಂಬಳಿ ಬಣ್ಣದ ಚುಕ್ಕೆಗಳು ಇರುವವು. ಇವು ಗೂಡು ಕಟ್ಟುವುದಿಲ್ಲ.

# Hoopoe

Upupa epops   हुधूड



# ಚಂದ್ರಮುಕುಟ

## ಮರಕುಟುಕ, ಕೂಕೂ ಹಕ್ಕಿ, ಪುತ್ರಪ್ರಿಯ, ಬಡಗಿ ಹಕ್ಕಿ

ಮೈನಾ ಹಕ್ಕಿಯಷ್ಟಿರುವುದು (೯")
ಬೆನ್ನಮೇಲೆ ಝಿಬ್ರಾ ಪ್ರಾಣಿಗಿರುವಂತೆ ಬಿಳಿ ಮತ್ತು ಕರಿ ಬಣ್ಣದ ಪಟ್ಟಿಗಳಿರುವವು. ಒಂಟಿಯಾಗಿ ಇಲ್ಲವೆ ಜೊತೆಯಾಗಿ ಇರುವವು. ಗಟ್ಟಿಯಾದ ಗುದ್ದಲಿಯಾಕಾರದ ಚುಂಚು ಇರುವುದು. ಇದರಿಂದ ನೆಲ ಕೆದರಿ (ಅಗಿದು) ಆಹಾರ ಪಡೆಯುವದು. ಮೃದುವಾಗಿ, ಮಧುರವಾಗಿ '**ಹೋ-ಪೊ**' ಅಥವಾ **ಹೋ-ಪೊ-ಪೊ** ಎಂದು ಕೂಗುವುದು.

ಹುಳಗಳನ್ನು, ಹುಳಗಳ ಮೊಟ್ಟೆಗಳನ್ನು ತಿನ್ನುವುದು.
ಬೇಸಾಯಕ್ಕೆ ಸಹಾಯಕಾರಿಯಾಗಿದೆ.

**ಗೂಡು:** ಫೆಬ್ರುವರಿ ಯಿಂದ ಮೇ ತಿಂಗಳು.
ಸ್ವಾಭಾವಿಕವಾಗಿರುವ ಗಿಡದ ಪೊಟರೆ, ಗೋಡೆಯ ಸಂದು ಮನೆಯ ಜಂತಿಗಳಲ್ಲಿ ಹರಕು ಅರಿವೆ, ಸ್ತ್ರಾಗಳಿಂದ ಗೂಡು ಕಟ್ಟಿಕೊಳ್ಳುವುದು. ೫ ರಿಂದ ೬ ಬಿಳಿ ತತ್ತಿಗಳನ್ನು ಇಡುವುದು. ಎರಡೂ ಮರಿಗೆ ಆಹಾರ ತಂದು ಕೊಡಲು ಶ್ರಮಿಸುವವು.

# ಕಳ್ಳಿಪೀರ

## ಗುಂಗುರ ಪಂಚ

ಗುಬ್ಬಚ್ಚಿಯಷ್ಟು ಇರುವುದು (ಸುಮಾರು ೭")
ಬಯಲು ಜಾಗ, ಹೊಲಗಳಲ್ಲಿ, ತೋಟಗಳಲ್ಲಿ ಕಾಣುವುದು.
ಕೀಟಕ ಹಾರುವದನ್ನು ಕುಳಿತಲ್ಲಿಂದಲೇ ನೋಡಿ ಅದನ್ನು ಹಿಂಬಾಲಿಸಿ ಹಿಡಿಯುವುದು. ನಂತರ ಅದನ್ನು ತನ್ನ ಜಾಗೆಗೆ ತಂದು ಅದನ್ನು ಕೊಂದು ತಿನ್ನುವದು. ರಾತ್ರಿ ದಟ್ಟವಾದ ಎಲೆಗಳಿಂದ ತುಂಬಿದ ಮರಗಳಲ್ಲಿ ಬಹಳ ಸಂಖ್ಯೆಯಲ್ಲಿರುವವು.

**ಟಿಟ್-ಟಿಟ್** ಅಥವಾ **ಟ್ರೀ-ಟ್ರೀ-ಟ್ರೀ** ಎಂದು ಧ್ವನಿ ಮಾಡುವುದು.

**ಗೂಡು:** ಮುಖ್ಯವಾಗಿ ಫೆಬ್ರುವರಿ ಯಿಂದ ಮೇ ತಿಂಗಳಲ್ಲಿ ಗೂಡು ಕಟ್ಟುವುದು. ಉಸುಕಿನ ನೆಲದಲ್ಲಿ ಇಲ್ಲವೆ ಮಣ್ಣಿನ ಗೂಡಿನಲ್ಲಿ ತೂತು ಕೊರೆದು (ಭೂಮಿಗೆ ಸಮಾಂತರ ಅಥವಾ ಓರೆಯಾಗಿ ಕೊರೆಯುವವು) ಅದರಲ್ಲಿ ೪ ರಿಂದ ೭ ತತ್ತಿಗಳನ್ನು ಇಡುವುದು. ಗಂಡು ಮತ್ತು ಹೆಣ್ಣುಗಳೆರಡೂ ಗೂಡು ತೆಗೆಯುವಲ್ಲಿ, ಮರಿಗೆ ಆಹಾರ ಕೊಡುವಲ್ಲಿ ಸಮಾನ ಹೊಣೆಯನ್ನು ಹೊರುವವು.

# Little green bee-eater

*Merops orientalis* पोट्रींगा






# Indian roller

*Coracias benghalensis* नीलकंट

# ನೀಲಕಂಠ

## ಹಾಲಕ್ಕಿ, ಉಲಿಗ, ಉರುಳಿಗ

ಹಾರಿವಾಳದಷ್ಟಿರುವುದು.
ಹಾರುವಾಗ ಇದರ ರೆಕ್ಕೆಯು ನೀಲಿಯಾಗಿ ಕಾಣುವವು.
ಪ್ರಜನನ ಸಮಯದಲ್ಲಿ ವಾಯುವಿನಲ್ಲಿ ಲಾಗಾ
ಹಾಕುವುದು.

ಕಪ್ಪೆ, ಓತಿಕಾಟಗಳನ್ನು ತಿನ್ನುವ ಈ ಹಕ್ಕಿಯು
ಬೇಸಾಯಕ್ಕೆ ತೊಂದರೆಯನ್ನುಂಟು ಮಾಡುವ ಕೀಟಕ
ಗಳನ್ನು ತಿನ್ನುವದು. ಇದು **'ರೈತನ ಗೆಳೆಯ'** ಎಂದು
ಅನಿಸಿಕೊಂಡಿದೆ.

**ಗೂಡು:** ಮುಖ್ಯವಾಗಿ ಮಾರ್ಚದಿಂದ ಜುಲೈ ತಿಂಗಳು.
ಗಿಡದ ಪೊಟರೆಗಳಲ್ಲಿ ಇಲ್ಲವೇ ಮನೆಗಳ ಪೊಳ್ಳಾದ
ಗೋಡೆಗಳಲ್ಲಿ ಗೂಡು ಮಾಡುವುದು. ೪ ರಿಂದ ೫
ಹೊಳೆಯುವ ಬಿಳಿ ತತ್ತಿಗಳನ್ನು ಇಡುವುದು.

# ಛಿಪೋರಾ

ಇದು ಗುಬಚ್ಚಿಯಷ್ಟಿರುವುದು.

ಹಸಿರು ಬಣ್ಣದ್ದಿದ್ದು ಬಾಲದ ಹತ್ತಿರ ಕೆಂಪು ಇರುವುದು. ಗಂಡಿನ ಎದೆಯ ಹತ್ತಿರ ನೀಲಿ ಬಣ್ಣವಿರುವುದು. ಒಂಟಿಯಾಗಿ ಇಲ್ಲವೇ ಸಣ್ಣಗುಂಪಿನಲ್ಲಿ ಇರುವುದು. ಹಣ್ಣು ಹೂಬಿಡುವ ಮತ್ತು ಎಲೆಗಳಿಂದ ತುಂಬಿದ ಗಿಡದ ಮೇಲೆ ವಾಸಿಸುವುದು. ಗಿಡದಿಂದ ಗಿಡಕ್ಕೆ ಹಾರುವುದು. **ರಾತ್ರಿ ವೇಳೆಯಲ್ಲಿ ಕಣ್ಣುಕಪ್ಪಡಿಯಂತೆ ತಲೆಕೆಳಗೆ ಮಾಡಿ ತೂಗುತ್ತ ವಿಶ್ರಾಂತಿ ತೆಗೆದುಕೊಳ್ಳುವುದು.** ಹಣ್ಣು,ಹೂವಿನ ಮಕರಂದ ಇದರ ಮುಖ್ಯ ಆಹಾರ. '**ಚೀ-ಚೀ-ಚೀ** ಎಂದು ಕೂಗುವುದು.

**ಗೂಡು:** ಜನೇವರಿ ಯಿಂದ ಏಪ್ರಿಲ್ ತಿಂಗಳು. ಸ್ವಾಭಾವಿಕವಾಗಿರುವ ಗಿಡದ ಪೊಟರೆಗಳಲ್ಲಿ ಗೂಡು ಮಾಡುವವು. ೩ ಬಿಳಿಯ ತತ್ತಿಗಳನ್ನು ಇಡುವುದು.

# Indian Lorikeet

Loriculus vernalis भोरा, लोटकन






# Gray Hornbill

*Tockus birostris* चौलोत्रा

# ಕೊಂಬುಕೊಕ್ಕಿನ ಹಕ್ಕಿ

## ಮಂಗಟ್ಟೆ, ದನಚುಡಿಯಾ, ದಟ್ಟೋಳ ಹಕ್ಕಿ

೨೪″ ಇರುವುದು. ಹಕ್ಕಿಯು ದೊಡ್ಡ ಮರಗಳಲ್ಲಿ ಜೊತೆಯಾಗಿ ಇರುವವು. ಒಂದು ಹಾರಿ ಹೋದ ಮೇಲೆ ಇನ್ನೊಂದು ಅದನ್ನು ಅನುಸರಿಸುವುದು. ಜೋರಾಗಿ **ಕೆ-ಕೆ-ಕ** ಎಂದು ಮಾತನಾಡಿದಂತೆ ಕೂಗುವುದು. ಹಣ್ಣುಗಳು, ಓತಿಕಾಟ ಸಣ್ಣ ಇಲಿಗಳು, ದೊಡ್ಡ ಕೀಟಗಳು ಇದರ ಆಹಾರವಾಗಿವೆ.

**ಗೂಡು:** ಮಾರ್ಚ ದಿಂದ ಜೂನ ತಿಂಗಳು.
ಸಂತಾನೋತ್ಪತ್ತಿಯ ಕಾಲಕ್ಕೆ ಹೆಣ್ಣು ಮರದ ಪೊಟರೆಯಲ್ಲಿ ಕುಳಿತುಕೊಳ್ಳುವುದು. ಆಮೇಲೆ ಗಂಡು-ಹೆಣ್ಣು ಹಕ್ಕಿಗಳು ಪೊಟರೆಯ ಬಾಯಿಯನ್ನು ಹಸಿಮಣ್ಣು ಮತ್ತು ಹಿಕ್ಕೆಗಳಿಂದ ಸಣ್ಣ ರಂಧ್ರ ಬಿಟ್ಟು ಮುಚ್ಚಿ ಬಿಡುವವು. ನಂತರ ಹೆಣ್ಣು ಗೂಡಿನಲ್ಲಿ ಮೊಟ್ಟೆ ಇಡುವುದು. ಅವುಗಳಿಗೆ ಕಾವು ಕೊಡುವುದು. ಆ ವೇಳೆಯಲ್ಲಿ ಗಂಡು ಹೆಣ್ಣಿಗೆ ಆಹಾರವನ್ನು ಕಿಂಡಿಯಿಂದ ತಂದು ಕೊಡುವುದು. ಮೊಟ್ಟೆಗಳಿಂದ ಮರಿಗಳು ಹೊರಗೆ ಬಂದ ಮೇಲೆ ಹೆಣ್ಣು ಗೋಡೆಯನ್ನು ಒಡೆದು ಹೊರಗೆ ಬಂದು ಮತ್ತೆ ಗೂಡನ್ನು ಕಟ್ಟುವದು. ಮರಿಗಳು ದೊಡ್ಡವಾಗುವವರೆಗೆ ಗಂಡು-ಹೆಣ್ಣು ಎರಡೂ ಆಹಾರ ಒದಗಿಸುವವು. ಮರಿಗಳು ದೊಡ್ಡವಾದ ಮೇಲೆ ಗೋಡೆ ಒಡೆದು ಹೊರಗೆ ಬರುವವು. ೨-೩ ಶುಭ್ರವಲ್ಲದ ಬಿಳಿ ಬಣ್ಣದ ತತ್ತಿಗಳನ್ನು ಇಡುವುದು.

# Indian pitta

Pitta brachyura नवरंग



# ನೆಲಗುಪ್ಪೆ

ಮೈನಾ ಹಕ್ಕಿಗಿಂತಲೂ ಸ್ವಲ್ಪ ದೊಡ್ಡದು.

ಬಿದ್ದ ಎಲೆಗಳ ಮೇಲೆ ಅಡ್ಡಾಡುತ್ತ, ಹಸಿ ನೆಲವನ್ನು ಕೆದರಿ ಹುಳಗಳನ್ನು ಹಿಡಿಯುವುದು. ಜೋರಾಗಿ ಮತ್ತು ಸ್ಪಷ್ಟವಾಗಿ ಎರಡು ಧ್ವನಿಯಲ್ಲಿ 'ವ್ಹೀಟ್-ಟಿವ್' ಎಂದು ಮುಂಜಾನೆ ಮತ್ತು ಸಂಜೆ ೩-೪ ಪಕ್ಷಿಗಳು ಬೇರೆ ಬೇರೆ ಕಡೆಗಳಿಂದ ಉತ್ತರಿಸುವವು.

**ಗೂಡು :** ಮೇ ದಿಂದ ಅಗಸ್ಟ್ ತಿಂಗಳು.
ಗೋಲಾಕಾರದ ದೊಡ್ಡದಾದ ಗೂಡು ಕಟ್ಟಿಗೆಯ ತುಂಡುಗಳಿಂದ ಹುಲ್ಲು, ಬೇರಿನ ಎಳೆಗಳಿಂದ ನೆಲದ ಮೇಲಿರುವ ಕಂಟಿಗಳಲ್ಲಿ ಕಟ್ಟುವುದು.

೪ ರಿಂದ ೬ ಹೊಳೆಯುವ ಬಿಳಿಯ ತತ್ತಿಯ ಮೇಲೆ ಮಬ್ಬು ಜಾಂಬಳಿ ಬಣ್ಣದ ಚುಕ್ಕೆಗಳು ಮತ್ತು ಕೂದಲ ಎಳೆಯಷ್ಟು ಸಣ್ಣ ಎಳೆಗಳು ಕಾಣಿಸುವವು.

# ಕೋಗಿಲೆ

ಅನ್ಯಪುಷ್ಟ, ಅನ್ಯಭೃತ, ಪರಪುಷ್ಟ, ಅನಾಥ ಪಿಂಡಕ

ಕಾಗೆಯಷ್ಟಿರುವುದು (೧೭″)
ಗಂಡು ಕಪ್ಪಾಗಿದ್ದು ಕೆಂಪು ಕಣ್ಣುಗಳಿರವವು. ಹೆಣ್ಣು ಕಂದು ಬಣ್ಣದ್ದಿದ್ದು ಬಿಳಿ ಚುಕ್ಕೆಗಳಿರುವವು. ಗಿಡದ ಎಲೆಯ ಮರೆಯಲ್ಲಿ ಕುಳಿತು ಬೇಸಿಗೆಯಲ್ಲಿ **ಕುಊ-ಕುಊ-ಕುಊ** ಎಂದು ಕೂಗುವುದು. ಚಳಿಗಾಲದಲ್ಲಿ ಕೂಗುವದಿಲ್ಲ. ಹೆಣ್ಣು ಕಿರುಧ್ವನಿಯಲ್ಲಿ '**ಕಿಕೆ-ಕಿಕೆ-ಕಿಕೆ**' ಎಂದು ಕೂಗುವುದು. ಜೋರಾಗಿ ರೆಕ್ಕೆಗಳನ್ನು ಬಡೆಯುತ್ತ ನೇರವಾಗಿ ಹಾರುವುದು.

ಹಣ್ಣುಗಳು, ಬೀಜಗಳು, ಕೀಟಕಗಳು ಮತ್ತು ಕಂಬಳಿಹುಳು ಇವುಗಳ ಆಹಾರ.

**ಗೂಡು :** ಏಪ್ರಿಲ್‌ದಿಂದ ಅಗಸ್ಟ ತಿಂಗಳು ಮೊಟ್ಟೆಗಳನ್ನು ಇಡುವ ಕಾಲ. ಇದು '**ಪರಪುಷ್ಟ**' ಹಕ್ಕಿ. ಕಾಗೆಯ ಗೂಡಿನಲ್ಲಿ ತತ್ತಿಗಳನ್ನು ಇಡುವುದು. ಕಾಗೆಯ ತತ್ತಿಗಿಂತ ಸ್ವಲ್ಪ ಚಿಕ್ಕವಾಗಿರುತ್ತವೆ. ಇವುಗಳ ತತ್ತಿಗೆ ಕಾಗೆ ಕಾವು ಕೊಡುವವು, ಮರಿಗೆ ಆಹಾರ ಕೊಡುವವು. ಕೋಗಿಲೆ ತತ್ತಿಯನ್ನು ಇಟ್ಟಮೇಲೆ ಪೋಷಣೆಯ ಜವಾಬ್ದಾರಿಯನ್ನು ಹೊರುವುದಿಲ್ಲ.


# Koel कोयल, कोकिल

*Eudynamys scolopacea (Linnaeus)*



# Indian pipit

*Anthus novaeseclandiae* रुगेल चोर्चरी



# ಪಿಪಿಲೀಕ

ಪಿಪೀಲಿಕ

ಗುಬ್ಬಚ್ಚಿಯಷ್ಟಿರುವುದು (೬")
ನೋಡಲು ಹೆಣ್ಣು ಗುಬ್ಬಚ್ಚಿಯಂತೆ ಕಾಣುವುದು. ಉದ್ದವಾದ ಬಾಲವಿರುವುದು. ಪೈರು ಕೊಯ್ದು ಉಳಿದ ಕುಳೆಗಳಲ್ಲಿ ಹುಲ್ಲುಗಾವಲಿನಲ್ಲಿ, ಹುಲ್ಲು ಬೆಳೆದ ಕಲ್ಲು ಗುಡ್ಡಗಳ ಅಡಿಯಲ್ಲಿ ಆಹಾರ ಹುಡುಕುವುದು.

ಕೀಟಕಗಳು ಇದರ ಮುಖ್ಯ ಆಹಾರ.
**ಪೀಪಿಟ್-ಪೀಪಿಟ್** ಅಥವಾ **ಟ್ಸೀಪ್-ಟ್ಸೀಪ್** ಎಂದು ಗಂಡು ಭೂಮಿಯಿಂದ ಸ್ವಲ್ಪ ಅಡಿ ಹವೆಯಲ್ಲಿ ಹಾರುತ್ತ ಹೆಣ್ಣಿನ ಗಮನ ಸೆಳೆಯುವುದು.

**ಗೂಡು:** ಫೆಬ್ರುವರಿಯಿಂದ ಅಕ್ಟೋಬರ. ಮುಖ್ಯವಾಗಿ ಮಾರ್ಚದಿಂದ ಜೂನ ತಿಂಗಳು. ಟೊಳ್ಳಾದ ಕಪ್ಪಿನಾಕಾರದ ಗೂಡನ್ನು ಕೂದಲು, ಹುಲ್ಲು ಮತ್ತು ಬೇರಿನ ತುಂಡಿನಿಂದ ದನಕರುಗಳು ನಡೆದು ಹೋದ ಕೊಳಗದ ತಗ್ಗಿನಲ್ಲಿ ಕಟ್ಟುವವು. ೩ ರಿಂದ ೪ ಹಳದಿ ಅಥವಾ ಬಿಳಿ ಬೂದು ಬಣ್ಣದ ತತ್ತಿಗಳನ್ನಿಡುವುದು. ಅದರ ಮೇಲೆ ಕಂದು ಬಣ್ಣದ ಚುಕ್ಕೆಗಳಿರುವವು. ಗೂಡು ಕಟ್ಟಲು, ಮರಿಗಳ ಪಾಲನೆ ಪೋಷಣೆಯಲ್ಲಿ ಎರಡೂ ಭಾಗವಹಿಸುವವು.

# ಮೈನಾ

## ಗೊರವಂಕ, ಸಾರಿಕೆ, ಚಾಣಕ್ಕಿ


ಸುಮಾರು ೨೨.೫ ಸೆಂ.ಮಿ. ಇರುವುದು.
ರೈತನ ನೇಗಿಲ ಹಿಂದಿನಿಂದ ಹೋಗುತ್ತ ನೆಲದಿಂದ ಹೊರ ಬರುವ ಹುಳಗಳನ್ನು ತಿನ್ನಲು ಕಾಯುತ್ತಿರುವುದು. ಮನುಷ್ಯನ ಜೊತೆಯಲ್ಲಿ ವಾಸ ಮಾಡುವುದು.

ಹಣ್ಣು, ಕಾಳುಗಳು, ಕೀಟಕ, ಎರೆಹುಳ, ಚಿಟ್ಟೆ, ಮುಸುರಿ ಇದರ ಆಹಾರ. ರಾಡಿಂಯೋ-ರಾಡಿಯೋ-ರಾಡಿಯೊ ಮತ್ತು ಕೊಕ್-ಕೊಕ್-ಕೊಕ್ ಇಲ್ಲವೆ ಚೆರ್-ಚೆರ್ ಎಂದು ಕೂಗುವುದು.

**ಗೂಡು:** ಏಪ್ರಿಲ್ ದಿಂದ ಅಗಸ್ಟ್ ತಿಂಗಳಲ್ಲಿ ಗೂಡು ಕಟ್ಟುವುದು. ೪ ರಿಂದ ೫ ಹೊಳೆಯುವ ನೀಲಿ ಬಣ್ಣದ ಮೊಟ್ಟೆಗಳನ್ನಿಡುವುದು. ಗಂಡು ಮತ್ತು ಹೆಣ್ಣು ಎರಡೂ ಸಂಸಾರದ ಹೊರೆಯನ್ನು ಹೊರುವವು.

# Common myna

Acridotheres tristis देशी मैना



# Jungle Myna

*Acridotheres fuscus* जंगली मैना



# ಕಾಡು ಮೈನಾ

ಸುಮಾರು ೯" ಇರುವುದು.
ಹಣೆಯ ಮೇಲೆ ಪುಚ್ಛಗಳಿರುವವು. ಮೇಯುತ್ತಿರುವ ದನಗಳ ಹಿಂದೆ ಹೋಗಿ, ದನಗಳು ಚಲಿಸುವಾಗ ಜಿಗಿಯುವ ಜಿಟ್ಟೆಗಳನ್ನು, ಕೀಟಕಗಳನ್ನು ಹಿಡಿಯುವವು. ಹಣ್ಣು, ಕಾಯಿಗಳನ್ನು ತಿನ್ನುವದಲ್ಲದೇ ಮಕರಂದವನ್ನೂ ಕುಡಿಯುವವು.

**ಕೀಕ್-ಕೀಕ್-ಕೊಕ್-ಕೊಕ್** ಎಂದು ಸೊಗಸಾದ ಧ್ವನಿಯಲ್ಲಿ ಚಿಲಿ ಪಿಲಿ ಗುಟ್ಟುವವು. ರಾತ್ರಿ ವೇಳೆ ತಂಗಲು ದೊಡ್ಡ ಸಂಖ್ಯೆಯಲ್ಲಿ ಒಂದುಗೂಡುತ್ತವೆ.

**ಗೂಡು :** ಮುಖ್ಯವಾಗಿ ಫೆಬ್ರುವರಿಯಿಂದ ಜುಲೈ ತಿಂಗಳು. ಕಟ್ಟಿಗೆಯ ಸಣ್ಣ ತುಂಡು, ಗಿಡದ ಬೇರುಗಳು ಮತ್ತು ಹುಲ್ಲಿನಿಂದ ಗಿಡದ ೮ ರಿಂದ ೨೦ ಅಡಿ ಎತ್ತರದ ಪೊಟರೆಯೊಳಗೆ ಗೂಡು ಕಟ್ಟುವುದು. ೩ ರಿಂದ ೪ ಹೊಳೆಯುವ ಬೂದು-ನೀಲಿ ಬಣ್ಣದ ತತ್ತಿಗಳನ್ನು ಇಡುವುದು.

# ಟುವ್ವಿ, ಪಿದ್ದಿ

ಗುಬ್ಬಚ್ಚಿಯಷ್ಟಿರುವುದು (೬")
ಅತೀ ಚಟುವಟಿಕೆಯುಳ್ಳ ಪಕ್ಷಿ. ಗಿಡದ ಟೊಂಗೆಯ ಮೇಲೆ ಬಳ್ಳಿಯ ಮೇಲೆ, ಹೂವಿನ ಟೊಂಗೆಯ ಮೇಲೆ ಯಾವಾಗಲೂ ಜಿಗಿದಾಡುತ್ತಿರುವುದು. ಜೊತೆಯಾಗಿ ಇರುವವು.
ಕೀಟಕಗಳನ್ನು ಹಿಡಿಯುವ ಉಳಿದ ಪಕ್ಷಿಗಳ ಜೊತೆಗೂಡಿ ಹುಳಗಳನ್ನು ಹಿಡಿಯುವುದು.
ಕೀಟಕಗಳು ಅವುಗಳ ತತ್ತಿ, ಲಾರ್ವಾಗಳು, ಹೂವಿನ ಮೊಗ್ಗು ಹಣ್ಣು, ಬೀಜಗಳು ಇದರ ಆಹಾರವಾಗಿವೆ. ಹಾರಾಡುವಾಗ **ವ್ಹಿಟಿಟಿ, ವ್ಹಿಟಿಟಿ, ವ್ಹಿಟಿಟಿ** ಎಂದು ಕೂಗುವುದು.

**ಗೂಡು :** ಫೆಬ್ರುವರಿಯಿಂದ ನವ್ಹೆಂಬರ ತಿಂಗಳು.
ಗಿಡದ ಪೊಟರೆಯಲ್ಲಿ, ಗೋಡೆಗಳಲ್ಲಿ ಇಲ್ಲವೇ ಭೂಮಿಯ ಪೊಳ್ಳಿನಲ್ಲಿ ಕೂದಲು ಸುರುಳಿ, ಪುಚ್ಚ, ಮಾಸ್ ಸಸ್ಯದಿಂದ ಗೂಡು ಕಟ್ಟುವವು. ೫ ರಿಂದ ೧೫ ಅಡಿಗಳ ಎತ್ತರದಲ್ಲಿ ಗೂಡು ಕಟ್ಟುವವು. ೪ ರಿಂದ ೬ ಬಿಳಿ ಅಥವಾ ಬಿಳಿಗುಲಾಬಿ ಬಣ್ಣದ ತತ್ತಿಗಳ ಮೇಲೆ ಕೆಂಪು-ಕಂದು ಬಣ್ಣದ ಚುಕ್ಕೆಗಳು ಮತ್ತು ಗೆರೆಗಳು ಇರುವವು. ಎರಡೂ ಪಾಲನೆ-ಪೋಷಣೆ ಮಾಡಲು ಭಾಗಿಗಳಾಗಿರುವವು.

# Grey Tit

Parus major Linnaeus    रामगेंग्रा



# ಸಿಪಾಯಿ ಬುಲ್‌ಬುಲ್

ಬುಲ್ ಬುಲ್ ಪಕ್ಷಿಯಷ್ಟೇ ಇರುವುದು.
ತಲೆಯ ಮೇಲೆ ಜುಟ್ಟು ಮತ್ತು ಕಣ್ಣಿನ ಬಳಿ ಕೆಂಪು ಕಲೆ ಇರುತ್ತದೆ. ಚುರುಕಾಗಿ ಮತ್ತು ಆಕರ್ಷಕವಾಗಿ ಕೂಗಬಲ್ಲದು. ಯಾವಾಗಲೂ ಜೋಡಿಯಾಗಿ ವಿಹರಿಸುತ್ತವೆ. ವಿಶ್ರಾಂತಿಯ ಕಾಲದಲ್ಲಿ ಒಂದೆಡೆ ಒಟ್ಟಾಗಿ ಸೇರುತ್ತವೆ.

**ಗೂಡು :** ಫೆಬ್ರುವರಿಯಿಂದ ಅಗಸ್ಟ್ ತಿಂಗಳು.
ಗುಡಿಸಲುಗಳ ಮೇಲೆ, ಹಾಳುಗೋಡೆಯ ಪೊದರಿನಲ್ಲಿ ಮೇಲಿಂದ ಮೇಲೆ ಗೂಡು ಕಟ್ಟುವವು.

೨ ರಿಂದ ೪ ನಸು ಗುಲಾಬಿ ಬಣ್ಣದ ತತ್ತಿಗಳನ್ನು ಇಡುವುದು.
ಗಂಡು ಮತ್ತು ಹೆಣ್ಣು ಎರಡೂ ಸಂಸಾರದ ಕರ್ತವ್ಯದಲ್ಲಿ ಸಮಪಾಲು ವಹಿಸಿಕೊಳ್ಳುವವು.




# Redwhiskered Bulbul

*Pycnonotus jocosus (Linnaeus)* पोहारी बुलबुल

# ಕೆಂಪೆದೆಯ ಪಿಕಳೀಕ

ಗುಬ್ಬಚ್ಚಿಗಿಂತಲೂ ಚಿಕ್ಕದಾಗಿರುವುದು.
ಊರ ಹೊರಗೆ ರಸ್ತೆಯ ಬದಿಗೆ ಮತ್ತು ಬಂಗಲೆಗಳ ಅಂಗಳದಲ್ಲಿ, ಎಲೆಗಳಿಂದ ತುಂಬಿದ ಗಿಡಗಳಲ್ಲಿ ಒಂಟಿಯಾಗಿರುವುದು. ರೆಕ್ಕೆಯ ಕೀಟಕಗಳನ್ನು ಹಿಡಿಯುವದು.

**ಕ್ಲಿಕ್-ಕ್ಲಿಕ್** ಎಂದು ತೀಕ್ಷ್ಣವಾದ ಧ್ವನಿ ತೆಗೆಯುವುದು.

**ಗೂಡು:** ಜೂನದಿಂದ ಜುಲೈ ತಿಂಗಳು.
ಎಲೆ, ಸ್ಪಂಜು ಸಸ್ಯ (MOSS), ಕೂದಲು ಮುಂತಾದವುಗಳಿಂದ ಗಿಡಗಳ ಪೊಟರೆಯಲ್ಲಿ ೧೦ ರಿಂದ ೨೦ ಅಡಿ ಎತ್ತರದಲ್ಲಿ ಗೂಡು ಕಟ್ಟುವುದು. ೪ ರಿಂದ ೫ ತಿಳಿ ಹಸಿರು ಬಣ್ಣದ ತತ್ತಿಗಳ ಮೇಲೆ ಕೆಂಪು-ಕಂದು ಬಣ್ಣದ ಚುಕ್ಕೆಗಳು ತತ್ತಿಯ ಅಗಲವಾದ ಭಾಗದಲ್ಲಿ ಇರುವವು.




# Redbreasted Flycatcher

*Muscicapa parva Bechstein* तुर्री

# ಸಿಪಿಲ್

## ದಾಸರ ಹಕ್ಕಿ, ಕುಂಡೆಕುಸುಕ

ಗುಬ್ಬಚ್ಚಿಯಷ್ಟಿರುವುದು. (೬")
ಬಯಲಿನಲ್ಲಿ, ಬೆಳೆದ ಹುಲ್ಲಿನಲ್ಲಿ ಓಡುವುದು. ಬಾಲವನ್ನು ಯಾವಾಗಲೂ ಕೆಳಗೆ ಮೇಲೆ ಮಾಡುತ್ತಿರುವುದು. ರಾತ್ರಿ ವೇಳೆಯಲ್ಲಿ ಉಳಿದ ಸಿಪಿಲೆ ಹಕ್ಕಿಗಳ ಜೊತೆಗೆ ಮತ್ತು ಗುಬ್ಬಚ್ಚಿಯ ಗುಂಪಿನಲ್ಲಿ, ಕಬ್ಬಿನ ಬೆಳೆ ಇಲ್ಲವೆ ಎಲೆಗಳಿಂದ ತುಂಬಿದ ಗಿಡಗಳಲ್ಲಿ ಇರುವವು. ಇದು ಸಪ್ಟೆಂಬರ/ಅಕ್ಟೋಬರ ದಲ್ಲಿ ಬಂದು, ಮಾರ್ಚ/ಏಪ್ರಿಲ್‌ದಲ್ಲಿ ತೆರಳುವದು. ಕೀಟಕಗಳೆ ಇದರ ಮುಖ್ಯ ಆಹಾರ.

**ಗೂಡು:** ಹಾಳು ಬಿದ್ದ ಗೋಡೆಗಳಲ್ಲಿ, ಕಲ್ಲು-ಕುಟುರೆಗಳಲ್ಲಿ ಬೇರುಗಳ ತುಂಡು, ಕೂದಲು ಮತ್ತು ಪಾಚಿಗಳಿಂದ (Moss) ಹಾಸಿಗೆ ಮಾಡಿ ಗೂಡನ್ನು ಸಿದ್ಧಗೊಳಿಸುವುದು. ೪ ರಿಂದ ೬ ಬಿಳಿ ತತ್ತಿಗಳ ಮೇಲೆ ಕೆಂಪು ಕಂದು ಬಣ್ಣದ ಚುಕ್ಕೆಗಳು ಇರುವವು.




# White Wagtail

*Motacilla alba Linnaeus* धोबोन

# ಸುಳ್ಳಿ

## ಉಬ್ಬೆಕುಳ್ಳ, ರಾಬಿನ್

ಬುಲ್ ಬುಲ್ ಪಕ್ಷಿಯಷ್ಟಿರುವುದು (೮")

ಮುಂಜಾನೆ ಮತ್ತು ಸಾಯಂಕಾಲ ಬಾಲವನ್ನು ಮೇಲಕ್ಕೆ ಎತ್ತುತ್ತ **ಟ್ವೀಈ** ಎಂದು ಇಲ್ಲವೇ ಕರ್ಕಶವಾಗಿ **ಚರ್‌ರ** ಎಂದು ಕೂಗುವುದು.

ಹೂವಿನ ಮಕರಂದ, ನೆಲದ ಮೇಲಿನ ಇರುವೆ, ಹುಳ-ಹುಪ್ಪಡಿ ಮತ್ತು ಅವುಗಳ ತತ್ತಿಯನ್ನು ತಿನ್ನುತ್ತವೆ.

**ಗೂಡು:** ಏಪ್ರಿಲ್‌ದಿಂದ ಜುಲೈ ತಿಂಗಳು.
ಹುಲ್ಲು, ಕೂದಲುಗಳಿಂದ ಗೂಡನ್ನು ಗೋಡೆಯ ಹೊದರಿನಲ್ಲಿ ಇಲ್ಲವೇ ಗಿಡದ ಹೊದರಿನಲ್ಲಿ ೫ ಅಡಿಯಿಂದ ೧೦ ಅಡಿ ಎತ್ತರದ ಮೇಲೆ ಕಟ್ಟುವುದು. ೩ ರಿಂದ ೫ ತಿಳಿ ಹಸಿರು ಅಥವಾ ತಿಳಿ ನೀಲಿ ಬಣ್ಣದ ತತ್ತಿಗಳನ್ನು ಇಡುವುದು. ಹೆಣ್ಣು ಕಾವು ಕೊಡುವುದು ಗಂಡು ಆಹಾರ ತಂದು ಕೊಡುವುದು.




# Magpie-Robin

*Copsychus saularis* (Linnaeus) दय्यारे दय्या




# Pied Bushchat

*Saxicola caprata (Linnaeus)*

काला पिद्दा

# ಬೇಲಿ ಚಟಕ

ಗುಬ್ಬಚ್ಚಿಯಷ್ಟಿರುವದು. (೬")

ಗಂಡು ಕಪ್ಪಾಗಿದ್ದು ತಳಭಾಗ ಮತ್ತು ರೆಕ್ಕೆಯಲ್ಲಿ ಬಿಳಿ ಇರುವುದು. ಹೆಣ್ಣು ಕಂದು ಬಾದಾಮಿ ಬಣ್ಣದ್ದಿರುವುದು. ಹೊಲಗದ್ದೆಗಳಲ್ಲಿ, ಗಿಡಗಂಟೆಗಳಲ್ಲಿ ಕಾಣುವವು. ಗಿಡದ ಟೊಂಗೆಯ ಕೊನೆಗೆ ಕುಳಿತು ಚಿಕ್ಕ ಚಿಕ್ಕ ಕೀಟಕಗಳನ್ನು ಹಿಡಿಯುವವು. ರೆಕ್ಕೆಗಳನ್ನು ಜೋರಾಗಿ ಪಾರಿವಾಳದಂತೆ ಬಡಿಯುತ್ತ ಹಾರುವುದು.

**ಗೂಡು:** ಮುಖ್ಯವಾಗಿ ಫೆಬ್ರುವರಿಯಿಂದ ಮೇ ತಿಂಗಳು. ನೆಲದಲ್ಲಿರುವ ತಗ್ಗುಗಳಲ್ಲಿ, ಕೊರಕಲು ನೆಲದಲ್ಲಿ ಹುಲ್ಲಿನಿಂದ ಹಾಸಿಗೆ ಮಾಡಿ, ಕೂದಲು, ಉಣ್ಣೆಯಿಂದ ಗೂಡನ್ನು ರಚಿಸುವುದು. ೩ ರಿಂದ ೫ ತತ್ತಿಗಳು ತಿಳಿನೀಲಿ ಬಣ್ಣದ್ದಾಗಿ ಇದ್ದು ಅವುಗಳ ಮೇಲೆ ಕೆಂಪು ಕಂದು ಬಣ್ಣದ ಚುಕ್ಕೆಗಳು ಇರುವವು. ಹೆಣ್ಣು ಮಾತ್ರ ಕಾವು ಕೊಡುವುದು. ಗಂಡು ಗೂಡು ಕಟ್ಟಲು, ಮರಿಗಳಿಗೆ ಆಹಾರ ತಂದು ಕೊಡುವುದರಲ್ಲಿ ಹೆಣ್ಣಿಗೆ ಸಹಾಯ ಮಾಡುವುದು ಅಪರೂಪ.

# ರಾಟವಾಳ

## ಚಿಕ್ಕ ಗರಿಕೆ ಹಕ್ಕಿ

ಗುಬ್ಬಚ್ಚಿಗಿಂತಲೂ ಚಿಕ್ಕದಾಗಿರುವುದು.
ಹೊಲಗಳಲ್ಲಿ ಗುಂಪಾಗಿ ಇರುವವು. ಕೆಲವು ಸಲ ೨೦೦ಕ್ಕಿಂತ ಹೆಚ್ಚಾಗಿ ಇರುವವು. ಅಡ್ಡಾತಿಡ್ಡಿಯಾಗಿ ಹಾರುವವು. ಚಿಲಿಪಿಲಿ ಮಾಡುವವು. ಹುಲ್ಲಿನ ಬೀಜಗಳನ್ನು ರೆಕ್ಕೆಗೆದ್ದಲುಗಳನ್ನು ಭೂಮಿಯಿಂದ ತಗೆದು ತಿನ್ನುವವು.

**ಗೂಡು:** ಜುಲೈ ದಿಂದ ಅಕ್ಟೋಬರ ತಿಂಗಳು ಗೂಡನ್ನು ಮುಳ್ಳು ಬೇಲಿಯಲ್ಲಿ ಅಥವಾ ಗಿಡದಲ್ಲಿ ಕಟ್ಟುವವು.ಹುಲ್ಲಿನ ಗರಿಯಿಂದ ದುಂಡಾಗಿ ರಚಿಸುವುದು. ಗೂಡಿನ ಬದಿಗೆ ಮೇಲ್ಗಡೆಯಿಂದ ಪ್ರವೇಶ ದ್ವಾರವಿರುವುದು. ಗೂಡಿನ ವ್ಯಾಸ ೮" ಇದ್ದು, ಒಂದೇ ವೇಳೆಯಲ್ಲಿ ಗಿಡದಲ್ಲಿ ಅನೇಕ ಗೂಡುಗಳನ್ನು ಕಾಣಬಹುದು.
೪ ರಿಂದ ೮ ಬಿಳಿ ಮೊಟ್ಟೆಗಳನ್ನು ಇಡುವುದು. ಎರಡೂ ಪಾಲನೆ ಪೋಷಣೆಯಲ್ಲಿ ಪಾಲ್ಗೊಳ್ಳುವವು. ಇವ ವರ್ಷಕ್ಕೆ ೫ ಸಲ ಮರಿಮಾಡಿದ ದಾಖಲೆ ಇದೆ.





# Spotted Munia

*Lonchura punctulata (Linnaeus)*

# House Sparrow

*Passer domesticus* गौरिय्या



# ಗುಬ್ಬಚ್ಚಿ

ಗುಂಚಕ್ಕಿ

ಸುಮಾರು 6" ಇರುವುದು.
ಹೆಣ್ಣು ಬೂದು ಬಣ್ಣದ್ದಿರುವುದು. ಅತೀ ಸಾಮಾನ್ಯವಾಗಿ ಮನೆಗಳಲ್ಲಿ, ಅಂಗಳದಲ್ಲಿ, ಹುಲುಸಾಗಿ ಬೆಳೆದ ತೆನೆಗಳ ಮೇಲೆ ಕಾಣುವವು.

ಟ್ಸಿ-ಟ್ಸಿ-ಟ್ಸಿ ಅಥವಾ ಚಿರ್-ಚಿರ್-ಚಿರ್, ಚಿಂವ್, ಚಿಂವ್ ಎಂದು ಕೂಗುವವು.

**ಗೂಡು :** ವರ್ಷದ ಎಲ್ಲ ತಿಂಗಳುಗಳಲ್ಲಿ ಗೂಡು ಕಟ್ಟುವುದು. ಮನೆಯ ನ್ಯಾಗೊಂದಿಗೆ, ಗೋಡೆಯ ಹೊದರಿನಲ್ಲಿ, ಮನೆಯ ಲ್ಯಾಂಪಶೇಡ ಮೇಲೆ, ಒಣಹುಲ್ಲು, ಸ್ಟ್ರಾ, ಪುಚ್ಚಗಳಿಂದ ಗೂಡ. ಕಟ್ಟುವುದು. 4 ರಿಂದ 5 ಬಿಳಿ ಹಸಿರು ಬಣ್ಣದ ತತ್ತಿಗಳ ಮೇಲೆ ಕಂದು ಬಣ್ಣದ ಚುಕ್ಕೆಗಳಿರುವವು.

# ಕೆಬ್ಬಕ್ಕಿ

ಮೈನಾ ಹಕ್ಕಿಯಷ್ಟಿರುವುದು (೯")
ಸಾಗುವಳಿ ಮಾಡಿದ ಹೊಲದಲ್ಲಿ ಗುಂಪಾಗಿ ಇರುವವು. ಚಳಿಗಾಲದಲ್ಲಿ ಭೇಟಿ ಕೊಡುವ ಪಕ್ಷಿ. ಜುಲೈ-ಅಗಷ್ಟದಲ್ಲಿ ಬರುವವು. ಏಪ್ರಿಲ್ ಮಧ್ಯಭಾಗದಲ್ಲಿ ಹೋಗುವವು. ಜೋಳದ ಹೊಲದಲ್ಲಿ ಸುಮಾರು ೫೦೦ ರಷ್ಟು ಗುಂಪುಗಳಲ್ಲಿ ಕುಳಿತು ತೆನೆಗಳನ್ನೆಲ್ಲ ಬರಿದಾಗಿ ಮಾಡುವವು. ಜೊತೆಗೆ ಬೆಳೆಗಳಿಗೆ ತಗಲುವ ಕೀಟಕಗಳ ಗುಂಪನ್ನು ನಾಶ ಮಾಡುವವು. ಆಲ, ಅಶ್ವತ್ಥ ಮರಗಳಲ್ಲಿ ಆಗುವ ಹಣ್ಣುಗಳನ್ನು ತಿನ್ನುವವು. ಕೆಲವು ಗಿಡಗಳ ಬೀಜಗಳನ್ನು ತಿನ್ನುವವು. ಹೂವಿನ ಮಕರಂದವನ್ನು ಕುಡಿಯುವವು, **ಪರಕೀಯ ಪರಾಗಸ್ಪರ್ಶ ಮಾಡಲು ಸಹಾಯಕವಾಗಿವೆ**. ಮಧ್ಯಾಹ್ನದ ಬಿಸಿಲನಲ್ಲಿ ಗಿಡದ ನೆರಳಿನಲ್ಲಿ ಕುಳಿತು ವಿಶ್ರಾಂತಿಯನ್ನು ತೆಗೆದುಕೊಳ್ಳುವಾಗ ಮಧುರವಾಗಿ ಕೂಗುವುದು.

**ಗೂಡು :** ಮೇ ದಿಂದ ಜೂನ ತಿಂಗಳು.
ಹಾಳು ಬಿದ್ದ ಕಲ್ಲು-ಕುಟರಿಗಳಲ್ಲಿ, ಗುಡ್ಡಗಾಡಿನಲ್ಲಿ ಗೂಡು ಕಟ್ಟುವುದು.

# Rosy starling

Sturnus roseus तिल्योर



# ನವಿಲು

ಸುಮಾರು ೬' ದೊಡ್ಡದಿರುವುದು.
ದಟ್ಟವಾಗಿ ಬೆಳೆದ ಕಂಟೆಗಳಲ್ಲಿ, ಹರಿಯುವ ನೀರಿನ ಸಮೀಪವಿರುವ ತೋಟಗಳಲ್ಲಿ, ಚಿಕ್ಕಗುಡ್ಡಗಳಲ್ಲಿ ಕಾಣಬಹುದು. ಗಂಡಿನ ಪುಚ್ಛ ೩ ರಿಂದ ೪ ಅಡಿ ಉದ್ದ ಇರುವುದು. ಒಂದು ಗಂಡು ೪-೫ ಹೆಣ್ಣುಗಳ ಜೊತೆಗೆ ಇರುವುದು.

ಕೀಟಕ, ಬತಿಕಾಟ, ಕಾಳು, ಕಾಯಿಪಲ್ಲೆ, ಹಾವು ಇದರ ಆಹಾರ. **'ಕಾ-ಆನ್,' 'ಕಾ-ಆನ್'** ಎಂದು ಆರೆಂಟು ಸಲ ತಲೆ ಮತ್ತು ಕುತ್ತಿಗೆಯನ್ನು ಎತ್ತಿ ಜೋರಾಗಿ ಕಾಳೆ ಊದಿದಂತೆ ಜೋರಾಗಿ ಕೂಗುವುದು.

**ಗೂಡು:** ಜನೇವರಿಯಿಂದ ಅಕ್ಟೋಬರ ತಿಂಗಳು. ಹೆಚ್ಚು ಆಳವಿಲ್ಲದಂತೆ ನೆಲ ಕೆದರಿ ಅದರ ಮೇಲೆ ದಟ್ಟವಾಗಿ ಕಟ್ಟಿಗೆಯ ತುಂಡು ಮತ್ತು ಎಲೆಗಳಿಂದ ಗೂಡನ್ನು ರಚಿಸುವದು. ೩ ರಿಂದ ೫ ಹೊಳೆಯುವ ಕೆನೆಬಣ್ಣದ ತತ್ತಿಗಳನ್ನು ಇಡುವುದು.

# ನವಿಲು

# Common Peafowl

*Pavo cristatus*  मोर, मयूर



# ಪಕ್ಷಿ ಸಂಕುಲ

(ನೀರಿನ ಸಮೀಪವಿರುವ ಪಕ್ಷಿಗಳು)

## ಭಾಗ - ೩

# ಬೆಳ್ಳಕ್ಕಿ

## ಬೆನಕನ ಹಕ್ಕಿ


ಕೋಳಿಯ ಗಾತ್ರದಷ್ಟಿರುವುದು.


ಕೆರೆ, ಹೊಂಡಗಳಲ್ಲಿ ಕಾಣುವುದು. ಬಕದಂತೆ ನಿಧಾನವಾಗಿ ರೆಕ್ಕೆ ಬಡಿಯುತ್ತ ಹಾರುವುದು. ಕೀಟಕಗಳು, ಕಪ್ಪೆ, ಸಣ್ಣ ಸರೀಸೃಪಗಳು ಇದರ ಆಹಾರ.

**ಗೂಡು:** ನವೆಂಬರ ದಿಂದ ಫೆಬ್ರುವರಿ ತಿಂಗಳು.
ತೆಳುವಾದ ಕಟ್ಟಿಗೆಯ ತುಂಡಿನಿಂದ ಕಾಗೆಯ ಗೂಡಿನಂತೆ ಸ್ತ್ರಾ ಮತ್ತು ಎಲೆಗಳಿಂದ ಗೂಡನ್ನು ಗಿಡದ ಮೇಲೆ ಕಟ್ಟುವುದು. ಹಳ್ಳಿಗಳ ಸಮೀಪವಿರುವಂತೆ ಗೂಡು ಕಟ್ಟುವುದು.
೪ ತತ್ತಿಗಳು ತಿಳಿನೀಲಿ ಹಸಿರು ಬಣ್ಣದವುಗಳಾಗಿರುವವು

# Cattle Egret

*Babulcus ibis* सुर्खिया बाग्ला, गाय बाग्ला




Gray Heron
Ardea cinerea नारी, अंजोन
कोबुद
SURESH


# ಕುರುಡು ಬಕ

ಹಸು ಕೊಕ್ಕರೆಯ ಗಾತ್ರದಷ್ಟಿರುವುದು.
ಕುಳಿತಾಗ ಮಣ್ಣಿನ ಬಣ್ಣದಂತೆ ಮೈಬಣ್ಣ ಇರುವುದು.
ಹಾರುವಾಗ ಅದರ ರೆಕ್ಕೆಗಳು ಬಿಳಿಯಾಗಿ ಕಾಣುವವು.
ನೀರು ಇರುವಲ್ಲಿ, ಸರೋವರ, ಕೆರೆ-ಕುಂಟೆಗಳಲ್ಲಿ, ಮಠಗಳ ಕೆರೆಗಳಲ್ಲಿ ಇರುವವು. ನೀರಿನ ಒಂದು ದಂಡೆಯ ಭಾಗದಲ್ಲಿ ಸುಮ್ಮನೇ ನಿಂತು, ಆಹಾರ ಕಂಡೊಡನೆಯೆ ತಕ್ಷಣ ಹಿಡಿಯುವುದು. ಎಲೆಗಳಿಂದ ದಟ್ಟವಾಗಿ ತುಂಬಿರುವ ಗಿಡಗಳಲ್ಲಿ ಕಾಗೆ ಮತ್ತಿತರ ಪಕ್ಷಿಗಳ ಜೊತೆಗೆ ವಾಸಿಸುವುದು.
ಹಾರುವಾಗ ಜೋರಾಗಿ ಮೇಲು ಧ್ವನಿಯಲ್ಲಿ 'ವಾಕು' ಎಂದು ಕೂಗುವುದು.

**ಗೂಡು:** ನವ್ಹೆಂಬರ ದಿಂದ ಜನೇವರಿ ತಿಂಗಳು.
ಊರಿನ ಸಮೀಪವಿರುವ ಮಾವಿನಮರ, ಹುಣಿಸೆ ಮರ ಮುಂತಾದವುಗಳಲ್ಲಿ ಕಾಗೆ ಗೂಡು ಕಟ್ಟಿದಂತೆ ಕಟ್ಟುವವು.
೩ ರಿಂದ ೫ ತಿಳಿ ಹಸಿರು ನೀಲಿ ಬಣ್ಣದ ತತ್ತಿಗಳಿರುವವು.

# Black Ibis

*Pseudibs papillosa* काला बाझा, कोरांकुल



# ಕರಿ ಬೂಸಾ
## ಕೆಂಬರಲು ಕರಿಕಾಗೆ

ಕೋಳಿಯ ಗಾತ್ರದಷ್ಟಿರುವುದು.
ಕೆರೆ ಸರೋವರಗಳ ಹತ್ತಿರ ಕಂಡು ಬರುವವು.

ಕೀಟಕಗಳು, ಚಿಕ್ಕ ಓತಿಕಾಟ, ಕಾಳುಗಳು ಇದರ ಆಹಾರ.

**ಗೂಡು:** ಉತ್ತರ ಭಾರತದಲ್ಲಿ ಮಾರ್ಚದಿಂದ ಅಕ್ಟೋಬರ, ದಕ್ಷಿಣ ಭಾರತದಲ್ಲಿ ನವ್ಹಂಬರ ದಿಂದ ಡಿಸೆಂಬರ.
ಗೂಡು ದೊಡ್ಡದಾಗಿದ್ದು ಕಪ್ಪಿನಾಕಾರವಾಗಿರುವುದು. ಕಟ್ಟಿಗೆಯ ತುಂಡುಗಳನ್ನು, ಪುಚ್ಚಗಳನ್ನು ಬಳಸುವುದು ಗಿಡದ ಎತ್ತರದ ಭಾಗದಲ್ಲಿ ನೀರಿನಿಂದ ದೂರದಲ್ಲಿ ಕಟ್ಟುವುದು. ೨ ರಿಂದ ೪ ತತ್ತಿಗಳಿದ್ದು ತಿಳಿ ಹಸಿರು ಬಣ್ಣದ್ದಾಗಿರುವವು.



# White ibis

Threskiornis aethiopica सफेद बाझा, मुंडा



# ಬಿಳಿ ಬೂಸಾ

## ಕೆಂಬರಲು ಬಿಳಿಕಾಗೆ

ಕೋಳಿಯ ಗಾತ್ರದ್ದಿರುವುದು.
ಜವುಳು ಭೂಮಿ, ಕೆಸರು ತುಂಬಿದ ತಗ್ಗುಗಳಲ್ಲಿ ಬಹಳ ಚಟುವಟಿಕೆಯಿಂದ ಓಡಾಡುವುದು. ರಾಡಿ ಮಣ್ಣಿನಲ್ಲಿ ತನ್ನ ಉದ್ದವಾದ ಚುಂಚದಿಂದ ನಿಧಾನವಾಗಿ ಕಲುಕಿ ಹುಳಗಳನ್ನು ಹಿಡಿಯುವದು. ಚಮಚೆ ಕೊಕ್ಕಿನ ಹಕ್ಕಿಗೆ (Spoon bill) ಅತೀ ಸಂಬಂಧವಿದೆ.

ಗೋದುಕಪ್ಪೆ, ಕಪ್ಪೆ, ಮೃದ್ವಂಗಿಗಳು, ಕೀಟಕಗಳು ಮತ್ತು ನೀರಿನಲ್ಲಿರುವ ಸಸ್ಯಗಳು ಇದರ ಆಹಾರ.

**ಗೂಡು:** ದಕ್ಷಿಣ ಭಾರತದಲ್ಲಿ ನವೆಂಬರದಿಂದ ಫೆಬ್ರುವರಿ, ಉತ್ತರ ಭಾರತದಲ್ಲಿ ಜೂನದಿಂದ ಅಗಸ್ಟ್ ತಿಂಗಳಲ್ಲಿ ಗೂಡು ಕಟ್ಟುವವು. ನೀರಿಗೆ ಸಮೀಪವಿರುವ ಗಿಡದ ಮೇಲೆ ಕಟ್ಟಿಗೆಯ ತುಂಡಿನಿಂದ ಕಟ್ಟುವುದು. ೨ ರಿಂದ ೪ ನೀಲಿ ಅಥವಾ ತಿಳಿ-ಹಸಿರು ಬಣ್ಣದ ತತ್ತಿಗಳು ಇರುವವು. ಕೆಲವು ಸಲ ತತ್ತಿಯ ಮೇಲೆ ಹಳದಿ-ಕಂದು ಬಣ್ಣದ ನಾಜೂಕಾದ ಚುಕ್ಕೆಗಳಿರುವವು.

# ಹೆಬ್ಬಾತು

## ರಾಜಹಂಸ


ಹದ್ದಿಗಿಂತ ದೊಡ್ಡದು. ಸುಮಾರು ೩೭″ ನೀರಿನ ಸುತ್ತ ಮುತ್ತ ಇರುವುದು. ಸುಂದರವಾದ ನಡಿಗೆ, ಕೊಕ್ಕು ಹಾಗೂ ಮಧುರ ಧ್ವನಿಗೆ ಪ್ರಸಿದ್ಧವಾಗಿದೆ. ಅಕ್ಟೋಬರದಲ್ಲಿ ಬಂದು ಮಾರ್ಚ ತಿಂಗಳ ಮಧ್ಯದಲ್ಲಿ ಹಿಮಾಲಯದ ಕಡೆಗೆ ವಲಸೆ ಹೋಗುವವು. ಕಾಲುಗಳು ಚಿಕ್ಕವಾಗಿದ್ದು ಬೆರಳುಗಳ ನಡುವೆ ಜಾಲಪೊರೆ ಇರುವುದು.

ಸಸ್ಯಜನ್ಯ ಪದಾರ್ಥಗಳು ಇದರ ಮುಖ್ಯ ಆಹಾರ. ಕಡಲೆ ಗೋದಿ ಮುಂತಾದ ಬೆಳೆಗಳಿಗೆ ಬಹಳ ನಷ್ಟವನ್ನು ಉಂಟು ಮಾಡುತ್ತವೆ. ಆಂಗ್, ಆಂಗ್ ಎಂದು ಮಧುರವಾಗಿ ಕೂಗುವುದು.

**ಗೂಡು:** ಹೆಚ್ಚು ತೆರೆಗಳು ಬರುವ ಕಡೆಗೆ ಪುಚ್ಚಗಳಿಂದ ಸೊಗಸಾಗಿ ಗೂಡು ಕಟ್ಟಿ ಅದರಲ್ಲಿ ೩-೪ ದಂತಬಿಳಿ ಬಣ್ಣದ ಮೊಟ್ಟೆಗಳನ್ನಿಡುವುದು. ಲಡಾಕ್, ಟಿಬೆಟುಗಳಲ್ಲಿ ಏಪ್ರಿಲ್ ದಿಂದ ಜೂನ ತಿಂಗಳಲ್ಲಿ ಗೂಡು ಕಟ್ಟುವವು.

# Barheaded Goose

*Anser indicus* बिर्वा, सोवान



# ಗುಳುಮುಳುಕ


ಪಾರಿವಾಳದ ಗಾತ್ರದಷ್ಟಿರುವುದು. (೧೩") ಮಣ್ಣಿನ ಬಣ್ಣದ ಹಕ್ಕಿ. ಕೆರೆ-ಕುಂಟೆಗಳಲ್ಲಿ ಕಂಡು ಬರುವುದು. ಚೆನ್ನಾಗಿ ಈಜುವುದು. ಸೊಗಸಾಗಿ ಮುಳುಗು ಹಾಕುವುದು.

ನೀರಿನಲ್ಲಿರುವ ಹುಳ ಹುಪ್ಪಡಿಗಳು, ಕಪ್ಪೆಯ ಮರಿ, ಕಪ್ಪೆ ಏಡಿ ಮುಂತಾದವುಗಳು ಇದರ ಆಹಾರ.

**ಗೂಡು:** ಮುಖ್ಯವಾಗಿ ಏಪ್ರಿಲ್ ಮತ್ತು ಅಕ್ಟೋಬರ ತಿಂಗಳುಗಳ ಮಧ್ಯದಲ್ಲಿ ಅರ್ಧ ತೇಲುವ ಗೂಡು ಕಟ್ಟುವುದು. ತತ್ತಿಗಳು ೩ ರಿಂದ ೫ ಇದ್ದು ಮೊದಲು ಅವುಗಳ ಬಣ್ಣ ಬಿಳಿಯಾಗಿದ್ದು ಕೂಡಲೇ ಕಂದು ಬಣ್ಣದ ಛಾಯೆಗೆ ತಿರುಗುವವು.

# Little Grebe OR Dabchick

*podiceps ruficollis* पाडुबि, डुब्डुबि, लावोक्री



# Demoiselle Crane

*Anthropoides virgo*

कोरकोरा, कूंज



# ಕೊಕ್ಕರೆ

## ಬಲಾಕ

ಬಾತುಗೋಳಿಗಿಂತ ಸ್ವಲ್ಪ ದೊಡ್ಡದು. ಎತ್ತರ ಸುಮಾರು ೩'. ಸಮೀಪದ ನೀರಿನ ದಡದಲ್ಲಿ, ಕಡಲೆ ಮತ್ತು ಗೋದಿಯ ಬೆಳೆಗಳಲ್ಲಿ ಗುಂಪು ಗುಂಪಾಗಿ ಕಾಣುವವು. ಮಧ್ಯಾಹ್ನ ಬಿಸಿಲಿನಲ್ಲಿ ಸರೋವರ ಇಲ್ಲವೆ ಕೆರೆಯ ದಂಡೆಯಲ್ಲಿ ಬಂದು ನಿಲ್ಲುವವು. ಹಾರುವಾಗ ಕುತ್ತಿಗೆ ಮತ್ತು ಕಾಲುಗಳನ್ನು ಪೂರ್ಣವಾಗಿ ಚಾಚಿರುವವು. 'V' ಆಕಾರದಲ್ಲಿ ಹಾರುವವು. ಜೋರಾಗಿ ಮತ್ತು ಸ್ವರ ಬದ್ಧವಾಗಿ **ಕುರ್ರ್, ಕುರ್ರ್** ಎಂದು ಧ್ವನಿ ಮಾಡುವುದು.

ತೆನೆಗಳಲ್ಲಿಯ ಕಾಳುಗಳು, ಕಡಲೆ, ಗೋದಿ, ಕೀಟಗಳು ಸಣ್ಣ ಸರೀಸೃಪಗಳು ಇದರ ಆಹಾರ.

**ಗೂಡು:** ಜುಲೈ ದಿಂದ ಮೇ ತಿಂಗಳು.
ಲಾಳ ಕಡ್ಡಿ, ಜೊಂಡು, ಸಣ್ಣ ಕಟ್ಟಿಗೆಯ ತುಂಡು, ಸ್ತ್ರಾ ಇವುಗಳಿಂದ ಭತ್ತದ ಬೆಳೆಗಳ ಮಧ್ಯದಲ್ಲಿ ಅಥವಾ ಜವುಗು ಪ್ರದೇಶದಲ್ಲಿ ಗೂಡು ಕಟ್ಟುವುದು. ೨ ಹಳದಿ ಬಣ್ಣದ ತತ್ತಿಯ ಮೇಲೆ ಕೆಂಪು ಕಂದು ಬಣ್ಣದ ಚುಕ್ಕೆಗಳು ಇರುವವು. ಎರಡೂ ಗೂಡನ್ನು ನಾಯಿ ಮತ್ತು ದನಗಳಿಂದ ಧೈರ್ಯವಾಗಿ ರಕ್ಷಿಸುತ್ತವೆ.

# ಚರಲೆ

## ದಾಸಗೋರೆ

ಸುಮಾರು ೨೪" ಇರುವದು.
ನೀರಿನಲ್ಲಿ ಉತ್ತಮವಾಗಿ ಈಜುವುದು. ವಲಸೆ ಹೋಗುವ ಪಕ್ಷಿ. ಭಾರತದ ಎಲ್ಲ ಕಡೆಗಳಲ್ಲಿ, ಬಂಗ್ಲಾದೇಶ, ಪಾಕಿಸ್ತಾನ ಸಿಲೋನ, ಬರ್ಮಾ ದೇಶಗಳಲ್ಲಿ ವಾಸಿಸುವವು. ಇದರ ಮಾಂಸ ರುಚಿಕರ.
ಇದು ಮುಖ್ಯವಾಗಿ ಶಾಖಾಹಾರಿ ಪಕ್ಷಿ. ಭತ್ತ ಬೆಳೆದು ನಿಂತಾಗ ಹೊಡೆಗಳಿಂದ ಕಾಳುಗಳನ್ನು ತಿನ್ನುವುದು. ನೆಲದಿಂದ ಕಾಳುಗಳನ್ನು ಕೆದಕಿ ತಿನ್ನುವುದು. ನೀರಿನಲ್ಲಿ ಬೆಳೆದ ಸಸ್ಯವನ್ನು ತಿನ್ನುವುದು. ಮೆಲು ಧ್ವನಿಯಲ್ಲಿ 'ಕ್ರೀಟ್' ಎಂದು ಕೂಗುವುದು.

**ಗೂಡು:** ಏಪ್ರಿಲ್ ದಿಂದ ಜೂನ ತಿಂಗಳು.
ನೀರಿನ ದಂಡೆಗೆ ಹೂಳು ತೆಗೆದು ತತ್ತಿಗಳನ್ನು ಇಡುವುದು. ೭ರಿಂದ ೧೦ ಕೆನೆ ಬಣ್ಣದ ಹೊಳೆಯುವ ತತ್ತಿಗಳನ್ನು ಇಡುವುದು.

# Common Teal

Anas crecca छोटी मुरधाबि, केर्री



खैम, खारिम,
कलिम, कोर्मा




# Purple Moorhen

*Porphyrio porphyrio (Linnaeus)*

# ಬಂಜರು ಕೋಳಿ

ಕೋಳಿಯ ಗಾತ್ರದಷ್ಟಿರುವುದು.

ಚಿಕ್ಕ ಮತ್ತು ಭಾರವಾದ ಕೆಂಪು ಚುಂಚ ಮತ್ತು ಬಾಲದ ಕೆಳಭಾಗದಲ್ಲಿ ಬಿಳಿ ಇರುವುದು. ಎತ್ತರವಾಗಿ ಬೆಳೆದ ಗದ್ದೆಗಳಲ್ಲಿ, ನೀರಿನ ಸಮೀಪ, ಜವುಗು ಪ್ರದೇಶದ ಹತ್ತಿರ ಇರುವವು.

ಭತ್ತದ ತೆನೆಗಳು, ಕೀಟಕಗಳು, ಮೃದ್ವಂಗಿಗಳು ಇದರ ಆಹಾರ.

**ಗೂಡು:** ಜೂನ ದಿಂದ ಸೆಪ್ಟಂಬರ ತಿಂಗಳು.
ಜೊಂಡು, ಲಾಳಕಡ್ಡಿ, ತೇಲುವ ವಸ್ತುಗಳಿಂದ ಗೂಡನ್ನು ನೀರಿನ ಮೇಲೆ ಕಟ್ಟುವುದು. ೩ ರಿಂದ ೭ ಹಳದಿ ಬಣ್ಣದ ತತ್ತಿಗಳ ಮೇಲೆ ಕೆಂಪು-ಕಪ್ಪು ಬಣ್ಣದ ಚುಕ್ಕೆಗಳಿರುವವು.

# Whitebreasted Waterhen

*Amaurornis phoenicurus* (Pennant)

दोहुक, तोल मुरगि



# ನೀರುಕೋಳಿ

ಸುಮಾರು ೧೬" ಇರುವುದು.

ಕೆರೆ, ಹೊಂಡಗಳ ದಂಡೆಗಳಲ್ಲಿ ಇರುವುದು. ಅಂಜುಬುರುಕ ಪಕ್ಷಿ. ಬಹಳ ಅಂಜಿದಾಗ ಎತ್ತರವಾದ ಬೆಳೆಗಳಲ್ಲಿ ಇಲ್ಲವೇ ಕಂಟಿಗಳಲ್ಲಿ ಓಡಿಹೋಗಿ ಅಡಗಿಕೊಳ್ಳುವುದು.

ಕಂಚಿನ ಕಂಠದಿಂದ ಒಂದೇ ಸವನೇ **ಕ್ರ-ಕ್ವಾಕ-ಕ್ವಾಕ್, ಕ್ರ-ಕ್ವಾಕ-ಕ್ವಾಕ** ಅಥವಾ **ಕೂಕ, ಕೂಕ-ಕೂಕ** ಎಂದು ಹಗಲಿನಲ್ಲಿ ಮೋಡ ಕವಿದಾಗ ಮತ್ತು ರಾತ್ರಿ ವೇಳೆಯಲ್ಲಿ ಕೂಗುವುದು.

ಕೀಟಕಗಳು, ಮೃದ್ವಂಗಿಗಳು, ಭತ್ತದ ತೆನೆಗಳು, ಕಾಳು ಮತ್ತು ನೀರಿನಲ್ಲಿಯ ಸಸ್ಯಗಳು ಇದರ ಆಹಾರ.

**ಗೂಡು:** ಜೂನದಿಂದ ಅಕ್ಟೋಬರ ತಿಂಗಳು.

ಕಟ್ಟಿಗೆಯ ಸಣ್ಣ ತುಂಡುಗಳು ಬಳ್ಳಿಗಳಿಂದ ನೀರಿನ ಸಮೀಪದ ಕಂಟಿಗಳಲ್ಲಿ ಕಪ್ಪಿನಾಕಾರದ ಗೂಡು ಕಟ್ಟುವುದು.

೬-೭ ಕೆನೆ ಬಣ್ಣ ಇಲ್ಲವೇ ಬಿಳಿಗುಲಾಬಿ ಬಣ್ಣದ ತತ್ತಿಗಳ ಮೇಲೆ ಕಂದು ಬಣ್ಣದ ಚುಕ್ಕೆಗಳಿರುವವು.




# Indian Moorhen

*Gallinula chloropus (Linnaeus)*

# ಬಂಜರು ಕೋಳಿ

## ಕೆಂಪು ನೀರುಗೋಳಿ

ಪಾರಿವಾಳಕ್ಕಿಂತ ಸ್ವಲ್ಪ ದೊಡ್ಡದು. (ಸುಮಾರು ೧೫")

ನೀರಿನಲ್ಲಿ, ನೀರಿನ ಹತ್ತಿರ ಇರುವುದು. ನೀರಿನಗುಂಟ ಜೋರಾಗಿ ರೆಕ್ಕೆ ಬಡಿಯುತ್ತ ಹಾರುವುದು. ಕುತ್ತಿಗೆಯನ್ನು ಮುಂದೆ ಮಾಡಿ ಕಾಲುಗಳನ್ನು ಹಿಂದಕ್ಕೆ ಚಾಚಿ ಹಾರುವುದು.

ಕೀಟಕಗಳು, ಕಾಳುಗಳು, ಭತ್ತದ ತೆನೆಗಳು ಇದರ ಆಹಾರ. ಮುಂಜಾನೆ ಮತ್ತು ಸಂಜೆ **ಕಿರ್ರಿಕ್-ಕ್ರೆಕ-ರೆಕ-ರೆಕ** ಎಂದು ಕೂಗುವುದು.

**ಗೂಡು:** ಜೂನದಿಂದ ಸೆಪ್ಟಂಬರ ತಿಂಗಳು.
ಗೂಡು ದೊಡ್ಡದಾಗಿದ್ದು ನೀರಿನಲ್ಲಿ ದೊರೆಯುವ ಸಸ್ಯಗಳಿಂದ ನೀರಿಗೆ ಸಮೀಪದ ಕಂಟಿಗಳಲ್ಲಿ ಗೂಡು ಕಟ್ಟುವುದು.
೫ ರಿಂದ ೧೨ ತಿಳಿ ಹಳದಿ ಬಣ್ಣದ ತತ್ತಿಗಳನ್ನು ಇಡುವುದು.
ಅವುಗಳ ಮೇಲೆ ದಟ್ಟ ಕಂದು ಬಣ್ಣದ ಕಲೆಗಳಿರುವವು.

# ದಾಸಹಕ್ಕಿ

## ನಾಮದ ಕೋಳಿ, ಕುಕ್ಕುಟ

ಕೋಳಿಯ ಗಾತ್ರದಷ್ಟಿರುವುದು.

ನೀರಾವರಿ ಪ್ರದೇಶದಲ್ಲಿ, ನೀರಿನ ಕೆರೆಗಳ ಹತ್ತಿರ ಕಾಣುವವು. ಅರ್ಧ ಓಡುತ್ತಾ ಹೋಗಿ ನಂತರ ಹಾರಲು ಪ್ರಾರಂಭಿಸುವವು.

ಹುಲ್ಲಿನ ಮತ್ತು ಭತ್ತದ ತೆನೆಗಳು, ನೀರಿನಲ್ಲಿಯ ಕೀಟಕಗಳು, ಮೃದ್ವಂಗಿಗಳು ಇದರ ಆಹಾರ.

**ಗೂಡು:** ಮುಖ್ಯವಾಗಿ ಜುಲೈ ದಿಂದ ಅಗಸ್ಟ್ ತಿಂಗಳು. ದೊಡ್ಡದಾದ ಜಡೆಗಟ್ಟಿದ ಜೊಂಡಿನಿಂದ ನೀರಿನ ಪಾತಳಿಯಿಂದ ಮೇಲೆ ಗೂಡು ಕಟ್ಟುವುದು. ೬ ರಿಂದ ೧೦ ನಾತಿಷುಡಿ ಬಣ್ಣದ ತತ್ತಿಗಳನ್ನು ಇಡುವುದು. ತತ್ತಿಯ ಮೇಲೆ ಕೆಂಪು ಬಣ್ಣದ ಅಥವಾ ಜಾಂಬಳಿ ಕಪ್ಪು ಬಣ್ಣದ ಚುಕ್ಕೆಗಳು ಇರುವವು.

# Coot

*Fulica atra Linnaeus*

आरी, ठेकोरी



# Black winged stilt

*Himantopus himantopus* टिंगुर
गाझपाउन , सोरगिन



# ಟಿಂಗೂರ

ಸುಮಾರು ೧೫" ಇರುವುದು.
ಕೆಂಪು ತೆಳ್ಳನೆಯ ಕಾಲುಗಳು ಸುಮಾರು ೧೦" ಎತ್ತರವಾಗಿರುವವು. ಚೂಪಾದ ಕಪ್ಪು ಚುಂಚು ಇರುವುದು.
ಕೆರೆ, ಸರೋವರ ಮತ್ತು ಜವುಗು ಪ್ರದೇಶದ ಹತ್ತಿರ ಜೊತೆಯಾಗಿ ಇಲ್ಲವೇ ಗುಂಪಾಗಿ ಇರುವವು. ಚೆನ್ನಾಗಿ ಈಜುವವು. ರಾಡಿ ನೀರಿನಲ್ಲಿ ಕೊಕ್ಕಿನಿಂದ ಅಲ್ಲಾಡಿಸಿ ಇಕ್ಕಳದಂತೆ ಇರುವ ಚುಂಚಿನಿಂದ ಆಹಾರವನ್ನು ಹಿಡಿಯುವುದು.

ಮೃದ್ವಂಗಿಗಳು, ನೀರಿನಲ್ಲಿರುವ ಕೀಟಕಗಳು, ಕೆಸರಿನಲ್ಲಿ ಇರುವ ಹುಳುಗಳು ಇದರ ಆಹಾರ. ಹಾರುವಾಗ **'ಚೆಕ್-ಚೆಕ-ಚೆಕ-ಚೆಕ್'** ಎಂದು ಮುನ್ಸೂಚನೆಯನ್ನು ಕೊಡುವುದು.

**ಗೂಡು:** ಏಪ್ರಿಲ್ ದಿಂದ ಅಗಸ್ಟ್ ತಿಂಗಳು.
ಕೆರೆಯ ದಂಡೆಯ ಮೇಲೆ ಹರಳುಗಳನ್ನಿಟ್ಟು ಅದರ ಮಧ್ಯದಲ್ಲಿ ಜೊಂಡು, ಸಸ್ಯಗಳಿಂದ ಗೂಡು ಕಟ್ಟುವುದು. ೩ ರಿಂದ ೪ ತಿಳಿ ಬೂದು ಬಣ್ಣದ ತತ್ತಿಗಳ ಮೇಲೆ ಕಪ್ಪು ಚುಕ್ಕೆಗಳಿರುವವು. 'ಟಿಟ್ಟಿಭ' ಪಕ್ಷಿಯ ತತ್ತಿಯನ್ನು ಹೋಲುವವು.

# ಕೆಂಪು ಗದ್ದೆಗೊರವ

ಸುಮಾರು ೧೨" ಇರುವುದು.
ಬೆನ್ನು ಕಂದುಬಣ್ಣದ್ದಾಗಿದ್ದು ಎದೆಯ ಭಾಗ ಬಿಳಿಯಾಗಿರುವುದು. ಕೆರೆಯ ಹತ್ತಿರ, ಹುಲ್ಲಿನ (ಭತ್ತದ) ಗದ್ದೆಗಳಲ್ಲಿ ಕಂಡು ಬರುವುದು. ಒಂಟಿಯಾಗಿ ಇಲ್ಲವೆ ಸಣ್ಣ ಗುಂಪಿನಲ್ಲಿ ಉಳಿದ ಪಕ್ಷಿಗಳ ಜೊತೆಗೆ ಇರುವುದು.

ಕೀರು ಧ್ವನಿಯಲ್ಲಿ **ಟ್ವೀ-ಟ್ವೀ-ಟ್ವೀ** ಅಥವಾ **ಟಿಯು-ಟಿಯು-ಟಿಯು** ಎಂದು ಕೂಗುವುದು.
ಹುಳ-ಹುಪ್ಪಡಿ, ಮೃದ್ವಂಗಿಗಳು ಇದರ ಆಹಾರ.

**ಗೂಡು:** ಮೇ ದಿಂದ ಜುಲೈ ತಿಂಗಳು.
ಹುಲ್ಲಿನ ಗದ್ದೆಗಳಲ್ಲಿ ೪-ತತ್ತಿಗಳನ್ನು ಇಡುವುದು. ತತ್ತಿಗಳು ಹಳದಿ-ಹಸಿರು ಬಣ್ಣದ್ದಾಗಿರುವವು. ಕೆಂಪು ಕಂದು ಬಣ್ಣದ ಅಥವಾ ಕಪ್ಪು-ನೇರಳೆ ಬಣ್ಣದ ಚುಕ್ಕೆಗಳಿರುವವು.

# Redshank

*Tringa totanus* सूर्मा, छूटा बोटन



# ಗಿಡಗ
ಡೇಗೆ, ಗರುಡ

ಸುಮಾರು ೨೬" ಇರುವುದು. ನೀರಿನ ಸಮೀಪದಲ್ಲಿ ಕಂಡು ಬರುವದು. ಸರೋವರ, ಕೆರೆ ಕುಂಟೆಯ ಹತ್ತಿರ ಭತ್ತದ ಗದ್ದೆಯ ಹತ್ತಿರ, ಸಮುದ್ರದ ಬಂದರುಗಳ ಹತ್ತಿರ ಮೀನು ಹಿಡಿಯುವಲ್ಲಿ ಕಾಣುವುದು.

ಮೀನು, ಕಪ್ಪೆ, ಏಡಿ ಅಲ್ಲದೇ ಸಣ್ಣ ಹಾವುಗಳನ್ನೂ ಹಿಡಿದು ತಿನ್ನುವುದು. ಮಳೆ ಬರುವ ಮುನ್ನ ಹವೆಯಲ್ಲಿ ಹಾರಾಡುವ ಹುಳಗಳನ್ನು ತಿನ್ನುವುದು.
ಕುದುರೆ ಹೇಕರಿಸಿದಂತೆ ಧ್ವನಿ ಇದೆ.

**ಗೂಡು:** ಡಿಸೆಂಬರ ದಿಂದ ಏಪ್ರಿಲ್ ತಿಂಗಳು.
ಸಣ್ಣ ಕಟ್ಟಿಗೆಯ ತುಂಡುಗಳನ್ನು ಬಿಡಿ ಬಿಡಿಯಾಗಿಟ್ಟು ಅದರಲ್ಲಿ ಹಸಿರು ಎಲೆಗಳನ್ನು ತುಂಬುವುದು. ಎತ್ತರ ಗಿಡಗಳಾದ ಅರಳಿ, ಆಲ, ಔದುಂಬರ ಮುಂತಾದ ದೊಡ್ಡ ಮರಗಳು ನೀರಿನ ಸಮೀಪವಿದ್ದಲ್ಲಿ ಕಟ್ಟುವವು. ಎರಡು ಬೂದು ಬಣ್ಣದ ಬಿಳಿ ತತ್ತಿಗಳಿದ್ದು ಅವುಗಳ ಮೇಲೆ ಕೆಂಪು ಕಂದು ಬಣ್ಣದ ಚುಕ್ಕೆಗಳಿರುವವು. ಗಂಡು, ಹೆಣ್ಣು ಎರಡೂ ಸಮನಾದ ಜವಾಬ್ದಾರಿಯನ್ನು ಹೊರುವವು.



# Brahminy kite

*Haliastur idus (Boddaert)*

ब्राह्मोनी चील, धोबिया चील, खेमकोर्णी

# ಉಲ್ಲಂಗಿ

## ಇಸ್ನಾಪು

ಸುಮಾರು ೯ರಿಂದ ೧೦ ಅಂಗುಲ ಇರುವುದು. ಚುಂಚು ೨ತ್ತಿ ಇಂಚು ಉದ್ದವಾಗಿರುವುದು. ಕೆರೆಯು ದಂಡೆಯು ಮೇಲಿರುವ ಭತ್ತದ ಗದ್ದೆಗಳಲ್ಲಿ, ಹುಲ್ಲಿನಲ್ಲಿ ಇರುವುದು. ನೆಲದ ಮೇಲೆ ಹೊರಟರೂ ಕಣ್ಣಿಗೆ ಸುಲಭವಾಗಿ ಕಾಣುವುದಿಲ್ಲ. ಹಾರುವಾಗ ಜೋರಾಗಿ ಮತ್ತು ಅಂಕು ಡೊಂಕಾಗಿ ಹಾರುವುದು.

ಹುಳು-ಹುಪ್ಪಡಿ, ಲಾರ್ವಾಗಳು ಇದರ ಆಹಾರ. ಉದ್ದವಾದ ಕೊಕ್ಕಿನಿಂದ ರಾಡಿಮಣ್ಣಲ್ಲಿ ಅಲುಗಾಡಿಸಿ ಆಹಾರವನ್ನು ಹಿಡಿಯುವದು.

**ಗೂಡು:** ಮೇ ಮತ್ತು ಜೂನ ತಿಂಗಳಿನಲ್ಲಿ ಕಾಶ್ಮೀರ ಮತ್ತು ಹಿಮಾಲಯ ಪ್ರದೇಶಗಳಲ್ಲಿ ಗೂಡು ಕಟ್ಟುವುದು. ಚಳಿಗಾಲದಲ್ಲಿ ಇಲ್ಲಿ ವಾಸಿಸುವದು. ಹುಲ್ಲು ಬೆಳೆದ ಜವುಳು ಪ್ರದೇಶದಲ್ಲಿ ಹುಲ್ಲಿನಿಂದ ತಗ್ಗಾದ ಗೂಡನ್ನು ರಚಿಸಿ ೪-ತತ್ತಿಗಳನ್ನು ಇಡುವುದು. ತತ್ತಿಗಳು ವಿವಿಧ ಬಣ್ಣದ್ದಾಗಿ ಇರುವವು. ಹಳದಿ-ತಿಳಿ ಹಸಿರು ಬಣ್ಣದವುಗಳಾಗಿದ್ದು ಅವುಗಳ ಮೇಲೆ ಚಾಕಲೇಟ ಕಂದು ಅಥವಾ ಕಪ್ಪು ಚುಕ್ಕೆಗಳು ಇರುವವು.

# Common snipe

*Capella gallinago* चोहा



# ಕೆಪ್ಪುಬಿಟ್ಟ ಮಿಂಚುಳ್ಳಿ

ಸುಮಾರು ೧೧" ಇರುವುದು.
ಹೆಚ್ಚಾಗಿ ನೀರಿನ ಬಳಿ ಇರುವುದು. ದಷ್ಟ-ಪುಷ್ಟವಾದ ವ್ಯಕ್ತಿ ಸಣ್ಣಕಾಲುಗಳು ಮತ್ತು ದೊಡ್ಡ ಕೊಕ್ಕು ಇದರ ಮುಖ್ಯ ಲಕ್ಷಣಗಳು. ನೀರಿನ ಸಮೀಪವಿರುವ ಕಲ್ಲು ಬಂಡೆಯ ಮೇಲೆ ಕೂಡುವುದು. ನೀರಿನಿಂದ (ಪಾತಳಿ) ೩೦ ರಿಂತ ಎತ್ತರದಿಂದ ನೀರಿಗೆ ಎರಗಿ ಮೀನುಗಳನ್ನು ಹಿಡಿಯುವುದು. 'ಚಿರ್‍ರಕ್-ಚೀರ್‍ರಕ್' ಎಂದು ತೀಕ್ಷ್ಣವಾಗಿ ಕೂಗುವುದು.

ಮೀನು, ಗೋದುಕಪ್ಪೆ, ಕಪ್ಪೆ ಮತ್ತು ನೀರಿನಲ್ಲಿ ವಾಸಿಸುವ ಕೀಟಕಗಳು ಇದರ ಮುಖ್ಯ ಆಹಾರ.

**ಗೂಡು:** ಅಕ್ಟೋಬರದಿಂದ ಮೇ ತಿಂಗಳು
ನೀರಿನ ದಂಡೆಗಿರುವ ಮಣ್ಣನ್ನು ಭೂಮಿಗೆ ಸಮಾಂತರವಾಗಿ ಅಗೆದು ಗೂಡು ತಯಾರಿಸುವುದು. ೫-೬ ಹೊಳೆಯುವ ಬಿಳಿ ಬಣ್ಣದ ತತ್ತಿಗಳನ್ನು ಇಡುವುದು. ಎರಡೂ ಪಕ್ಷಿಗಳು ಅಗೆಯಲು, ಕಾವು ಕೊಡಲು ಮರಿಗೆ ಆಹಾರ ಕೊಡಲು ಶ್ರಮಿಸುವವು.




# Pied Kingfisher

*Ceryle rudis (Linnaeus)* किलकिला, कोरोना, कोर्यौला




# Small Blue Kingfisher

*Alcedo atthis* (Linnaeus) छोटा किलकिला
शोरीफोन

# ಮಿಂಚುಳ್ಳಿ

## ಬಿಳಿ ಎದೆ ಮಿಂಚುಳ್ಳಿ

ಗುಬ್ಬಚ್ಚಿಗಿಂತಲೂ ದೊಡ್ಡದು (೮")
ನೋಡಲು ಆಕರ್ಷಣೀಯವಾದ ಪಕ್ಷಿ. ನೀರಿನ ಮೇಲೆ ಜೋತಾಡುವ ಟೊಂಗೆಯ ಮೇಲೆ ಕುಳಿತು ತಲೆ ಅಲ್ಲಾಡಿಸಿ ಜೋರಾಗಿ ನೀರಿಗೆ ಧುಮುಕಿದರೆ ಮೀನು ಹಿಡಿದುಕೊಂಡೇ ಬರುವುದು. **ಚಿಚೀ, ಚಿಚೀ** ಎಂದು ತೀಕ್ಷ್ಣ ಧ್ವನಿಯಿಂದ ಕೂಗುವುದು. ಸಣ್ಣ ಮೀನುಗಳು, ಗೋದುಕಪ್ಪೆ ಮತ್ತು ನೀರಿನಲ್ಲಿಯ ಕೀಟಗಳು ಇದರ ಮುಖ್ಯ ಆಹಾರವಾಗಿವೆ.

**ಗೂಡು :** ಮುಖ್ಯವಾಗಿ ಮಾರ್ಚದಿಂದ ಜೂನ ತಿಂಗಳು. ಗೂಡನ್ನು ನೀರಿನ ದಡದ ಭೂಮಿಯಲ್ಲಿ ಆ ಭೂಮಿಗೆ ಸಮಾಂತರವಾಗಿ ತೂತು ಕೊರೆದು ಕೊನೆಯಲ್ಲಿ ತತ್ತಿಯನ್ನು ಇಡಲು ಗೂಡನ್ನು ಅಗಲ ಮಾಡುವುದು. ೫ ರಿಂದ ೭ ಬಿಳಿಯ ಹೊಳೆಯುವ ಬಣ್ಣದ ತತ್ತಿಗಳನ್ನು ಇಡುವುದು. ಎರಡೂ ಸಂಸಾರದ ಹೊಣೆಯನ್ನು ಸಮನಾಗಿ ಹಂಚಿಕೊಳ್ಳುವವು.

# ಹಳದಿ ದಾಸರಹಕ್ಕಿ

ಕುಂಡೆಕುಸುಕ, ಬೆಟ್ಟಹಕ್ಕಿ

ಸುಮಾರು ೭" ಇರುವುದು.
ಉದ್ದ ಪುಚ್ಛದ ಈ ಹಕ್ಕಿ ನೀರಿನ ಬಳಿ, ಜವುಗು ಪ್ರದೇಶದಲ್ಲಿ ಕಾಣುವವು. ಬಾಲವನ್ನು ಯಾವಾಗಲೂ ಕೆಳಗೆ ಮೇಲೆ ಕುಣಿಸುತ್ತಿರುವುದು.

ಸಣ್ಣ ಹುಳ ಹುಪ್ಪಡಿಗಳೇ ಇದರ ಮುಖ್ಯ ಆಹಾರ.
'ಪ್ಷೀಸ್ಟ್' ಎಂದು ಜೋರಾಗಿ, ಸ್ಪಷ್ಟವಾಗಿ ಕೂಗುವುದು. ಕಬ್ಬಿನ ಬೆಳೆಯಲ್ಲಿದ್ದಾಗ ತನ್ನ ಧ್ವನಿಯಿಂದ ತನ್ನ ಇರುವನ್ನು ಬಂಧುಗಳಿಗೆ ಸೂಚಿಸುವುದು. ಇದರ ಅನೇಕ ಸಂಬಂಧಿಗಳು ಚಳಿಗಾಲದಲ್ಲಿ ದೂರದಿಂದ ನಮ್ಮಲ್ಲಿಗೆ ಬರುವವು.

**ಗೂಡು :** ಮೇ ದಿಂದ ಜುಲೈ ತಿಂಗಳು.
ಗೂಡನ್ನು ಹುಲ್ಲಿನಿಂದ ಕಪ್ಪಿನಾಕಾರದಲ್ಲಿ ಕೆರೆಯ ದಂಡೆಯಲ್ಲಿ ಕಟ್ಟುವುದು. ೩ ರಿಂದ ೫ ತತ್ತಿಗಳು ಇದ್ದು ಹಳದಿ-ಬೂದು ಬಣ್ಣದ ತತ್ತಿಗಳಿರುವವು. ಎರಡೂ ಪಾಲನೆ ಪೋಷಣೆಯನ್ನು ಮಾಡುವವು.

# Yellow Wagtail

*Motacilla flava* पान पिल्लाख



# ಲಾವಕ್ಕಿ

## ಭಾರದ್ವಾಜ, ಉಲ್ಲೀಕಿಂಡ, ಚರಂಡಿಲು ಹಕ್ಕಿ

ಗುಬ್ಬಚ್ಚಿಯಷ್ಟಿರುವುದು (೬")
ಹೊಲದಲ್ಲಿ, ಹುಲ್ಲು ಇರುವಲ್ಲಿ, ಕೆರೆಗಳ ಸಮೀಪ ಕೀಟಕಗಳನ್ನು ಹಿಡಿಯುವುದು ಮತ್ತು ಕಾಳುಗಳನ್ನು ತಿನ್ನುವುದು. ನೆಲದಿಂದ ಲಂಬವಾಗಿ ರೆಕ್ಕೆ ಬಡೆದು ಮೇಲೇರುತ್ತ-ಮೇಲೆರುತ್ತ ಆಕಾಶದಲ್ಲಿ ಸಣ್ಣ ವಸ್ತುವಿನಂತೆ ಕಾಣುವುದು. ಆ ಮೇಲೆ ಭೂಮಿಯ ಕಡೆಗೆ ಒಮ್ಮೆಲೇ ಸುರಂಗ ಹೊಡೆದಂತೆ ಇಳಿಯುವದು ಹೀಗೆ ಮೇಲಿಂದ ಮೇಲೆ ಮಾಡುವುದು.

**ಗೂಡು:** ಮುಖ್ಯವಾಗಿ ಫೆಬ್ರುವರಿಯಿಂದ ಜುಲೈ ತಿಂಗಳು. ನೆಲದ ಮೇಲೆ ಕಪ್ಪಿನಾಕಾರವಾಗಿ ಗೂಡು ರಚಿಸುವುದು. ಕೆಲವು ಸಲ ದನಕರುಗಳ ಗೊರಸಿನ ತುಳಿತದುಂಟಾದ ತಗ್ಗುಗಳಲ್ಲಿ ಹುಲ್ಲಿನ ರಕ್ಷಣೆ ಪಡೆದು ತತ್ತಿಗಳನ್ನಿಡುವುದು. ೩ ರಿಂದ ೪ ಬಿಳಿ ಅಥವಾ ತಿಳಿ ಕಂದು ಬೂದು ಬಣ್ಣದ ತತ್ತಿಗಳ ಮೇಲೆ ಕಂದು ಬಣ್ಣದ ಚುಕ್ಕೆಗಳಿರುವವು.

# Small Skylark

*Alauda gulgulo* भारात





ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - ೧೮.

ISBN 81-7713-021-8